School Leadership

TESS India

# Transforming teaching-learning process: developing an effective learning culture in your school

## ಬೋಧನಾ-ಕಲಿಕಾ ಪ್ರಕ್ರಿಯೆನ್ನು ಪರಿವರ್ತಿಸುವುದು: ಆಪ್ತ ಸಲಹೆ ಮತ್ತು ತರಬೇತಿ ನೀಡುವುದು





Teacher Education through School-based Support in India
www.TESS-India.edu.in

The Open University

UK aid from the British people

CC BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ** (**Open Educational Resource-OER**) ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್–ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು** (**National School leadership Curriculum Framework-India**) ಗುರುತಿಸಿರುವ ಶಾಲಾ ನಾಯಕತ್ವದ ಯಥಾದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಬೋಧನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಬೋಧನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಫೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ ಬಗ್ಗೆ**

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL12v1*
*Karnataka*

*Except for third party materials and oottherwise stated, this content is made availabblle under a Creative Commons Attribution-ShareAlike liceennce: http://creativecommons.org/licenses/by--sa/3.0/*

*TESS-India is led by The Open University UK and funded by UK aid from the UK government*

# ಈ ಘಟಕದಲ್ಲಿ ಏನಿದೆ

ಈ ಘಟಕವು ಒಂದು ಶಾಲೆಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರುವ ಆಯಾಮಗಳ ಹಾಗೂ ಅಂಶಗಳ ಪರಿಚಯ ಮಾಡಿಕೊಡುತ್ತದೆ. ಶಾಲಾ ಸಂಸ್ಕೃತಿಯ ಸಾಂಘಿಕ ಮೌಲ್ಯಗಳು, ಊಹೆಗಳು ಹಾಗೂ ನಂಬಿಕೆಗಳಿಂದ ಉದಯಿಸುತ್ತದೆ. ಈ ವಿಷಯಗಳು ಮುಂದೆ ವಿದ್ಯಾರ್ಥಿ ಶಿಕ್ಷಕರು, ಪಠ್ಯಕ್ರಮ ಬೋಧನೆ ಹಾಗೂ ಕಲಿಕಾ ಪ್ರಕ್ರಿಯೆ ಸಂಪನ್ಮೂಲಗಳು, ಸಂಘಟನಾ ಕ್ರಮಗಳು ಮತ್ತು ಅಗತ್ಯ ಸೌಕರ್ಯಗಳ ಸಂಬಂಧಗಳನ್ನು ನಿರ್ಧರಿಸುತ್ತವೆ. ಎಲ್ಲ ಶಾಲೆಗಳು ಒಂದು ಸಮಯದಾಯದಲ್ಲಿ ಸ್ಥಾಪಿತವಾಗಿರುತ್ತವೆ, ಶಾಲೆಯು ಮೈಗೂಡಿಸಿಕೊಂಡಂತಹ ಮೌಲ್ಯಗಳು, ಈ ಸಮುದಾಯದ ಕೊಡುಗೆಯಾಗಿದ್ದು ಶಾಲೆಯ ಮೇಲೆ ಪ್ರಭಾವ ಬೀರುತ್ತವೆ.

ಶಾಲಾ ಸಂಸ್ಕೃತಿಯನ್ನು **"ಮುಚ್ಚಿಟ್ಟ ಪಠ್ಯಕ್ರಮ"** ಎಂದು ಹೆಸರಿಸಲಾಗಿದೆ. ಈ ಸಂಸ್ಕೃತಿಯು ಶಾಲೆಯ ನಡಾವಳಿಗಳು ಪದ್ಧತಿಗಳು, ಸಂಸ್ಕಾರಗಳು, ಇತಿಹಾಸ, ಗುರುತು ಹಾಗೂ ಶಬ್ದಭಂಡಾರವನ್ನು ಸಿದ್ಧಗೊಳಿಸುತ್ತವೆ. ವಿದ್ಯಾರ್ಥಿಗಳು ಅನಾಯಾಸವಾಗಿ ತಮಗೆ ಗೊತ್ತಾಗದಂತೆಯೆ ನಡವಳಿಕೆಯ ನೀತಿಗಳನ್ನು ಮತ್ತು ಶಾಲಾ ಸಂಸ್ಕೃತಿಯ ಅಪೇಕ್ಷೆಗಳನ್ನು ಕಲಿಯುತ್ತಾರೆ, ಮತ್ತು ಇದು ಅವರ ಕಲಿಕೆಯನ್ನು ಸಹ ಪ್ರಭಾವಗೊಳಿಸುತ್ತದೆ.



**ಚಿತ್ರ 1 ಶಾಲೆಯ ಸಂಸ್ಕೃತಿ ಕಲಿಕೆಯನ್ನು ಪ್ರಭಾವಿಸಬಲ್ಲದು.**

ಶಾಲಾ ಸಂಸ್ಕೃತಿಯಲ್ಲಿನ ಬದಲಾವಣೆಗಳು, ಕ್ಷಿಪ್ರ ಪ್ರಕ್ರಿಯೆ ಅಲ್ಲ. ನೀವು ಕೈಗೊಳ್ಳುವ ಕ್ರಮಗಳು ಅದೆಷ್ಟೊ ತಿಂಗಳಗಳ ವರೆಗೆ, ವರ್ಷಗಳವರೆಗೆ ಯಾವುದೆ ಪರಿಣಾಮ ಹಾಗೂ ಫಲಿತಾಂಶ ತೊರದೆ ಇರಬಹುದು. ಪ್ರಸ್ತುತ ಸಂಸ್ಕೃತಿ ಹಾಗೂ ನಡವಳಿಕೆಗಳು ಧೀರ್ಘಕಾಲದ ವರೆಗೆ ಗಟ್ಟಿಯಾಗಿ ಮುಂದುವರೆಯಬಹುದು. ಈ ಪರಿಸ್ಥಿತಿಯು ದೀರ್ಘಕಾಲಾವಧಿಯ ಸಮಯವನ್ನು ಬಯಸಿ ಬದಲಾವಣೆಯ ಸರಣಿಯ ಬೇಕಾಗಬಹುದು. ಮುಖ್ಯವಾಗಿ ಗಂಭೀರ ಸ್ವರೂಪದ ಬದಲಾವಣೆಗಳನ್ನು ಪಡೆಯುವದಕ್ಕೆ ನೀವು ಶಾಲಾ ಸಂಸ್ಕೃತಿಯ ಬಗ್ಗೆ ಅರಿವಿಟ್ಟುಕೊಂಡು ಮತ್ತು ಉದ್ದೇಶಿತ ಬದಲಾವಣೆಯ್ನನು ಮುನ್ನಡೆಸುವಂತೆ ಇದ್ದು ಯಾವ ಹೊಸ ಸಂಸ್ಕೃತಿಯನ್ನು ಸ್ಥಾಪಿಸಬೇಕೆಂದು ಬಯಸಿದ್ದೀರೋ ಅದು ನಿಮ್ಮ ಕಲಿಕಾ ಪ್ರಕ್ರಿಯೆ ಮೇಲೆ ಉತ್ತಮ ಪ್ರಭಾವ ಬೀರುತ್ತದೆ. ಈ ಘಟಕವು ನಿಮ್ಮ ಶಾಲೆಯ ಕಲಿಕಾ ಸಂಸ್ಕೃತಿ ಬಗ್ಗೆ ತಿಳಿಯುವಂತೆ ಮಾಡಿ ಮತ್ತು ಅದರ ಕುರಿತಾಗಿ ನಿಮ್ಮ ನಾಯಕತ್ವದ ಬಗ್ಗೆಯೂ ತಿಳಿದುಕೊಳ್ಳುವಂತೆ ಮಾಡುತ್ತದೆ..

## ಕಲಿಕಾ ದಿನಚರಿ

ಈ ಘಟಕವು ಮೇಲೆ ಕಾರ್ಯ ಮಾಡುವ ಸಮಯದಲ್ಲಿ ನೀವು ಕೆಲವು ಟಿಪ್ಪಣಿಗಳನ್ನು ಮಾಡುವಂತೆ ತಿಳಿಸಲಾಗುವದು ಈ ದಿನಚರಿಯಲ್ಲಿ ನಿಮ್ಮ ವಿಚಾರಗಳು, ಗುರಿಗಳು ಹಾಗೂ ಯೋಜನೆಯಗಳನ್ನು ಒಂದೆಡೆ ಕ್ರೋಡೀಕರಿಸಿ ಇಡಬಹುದು. ಪ್ರಾಯಶಃ ನೀವೂ ಈಗಾಗಲೇ ಈ ಕಾರ್ಯ ಪ್ರಾರಂಭಿಸಿರಬಹುದು.

ನೀವು ಈ ಘಟಕದ ಮೇಲೆ ಒಬ್ಬರೆ ಕೆಲಸ ಮಾಡುತ್ತಿರಬಹುದು, ಆದರೆ ನಿಮ್ಮ ಕಲಿಕೆಯ ಬಗ್ಗೆ ಮತ್ತೊಂದು ಶಾಲಾ ನಾಯಕರೊಂದಿಗೆ ಚರ್ಚಿಸಿದರೆ ನೀವು ಇನ್ನು ಹೆಚ್ಚು ಕಲಿಯಬಹುದು, ಈ ವ್ಯಕ್ತಿಯು ನೀವು ಈಗಾಗಲೇ ಜೊತೆಯಾಗಿ ಕೆಲಸ ಮಾಡುತ್ತಿರುವ ಸಿಬ್ಬಂದಿಯಾಗಿರಬಹುದು ಅಥವಾ ಹೊಸದಾಗಿ ಪರಿಚಯಗೊಂಡ ವ್ಯಕ್ತಿಯೊಂದಿಗೆ ಸಂಬಂಧ ಹೊಂದಿ ಕೆಲಸ ಮಾಡುವುದಿರಬಹುದು ಇದನ್ನು ಸಂಘಟನಾತ್ಮಕವಾಗಿ ಅಥವಾ ಅನೌಪಚಾರಿಕವಾಗಿ ಮಾಡಬಹುದು. ಈ ಟಿಪ್ಪಣಿಗಳು ಈ ರೀತಿಯ ಸಭೆಗಳಲ್ಲಿ ಮತ್ತು ದೀರ್ಘಾವಧಿಯ ಕಲಿಕೆಗೆ ಬಹಳ ಉಪಯುಕ್ತವಾಗಬಹುದು.

# ಈ ಘಟಕದಲ್ಲಿ ಶಾಲಾ ನಾಯಕರು ಏನನ್ನು ಕಲಿಯಬಹುದು

- ಶಾಲಾ ಸಂಸ್ಕೃತಿ ಏನು ಮತ್ತು ಕಲಿಕೆಯ ಮೇಲೆ ಅದರ ಪ್ರಭಾವ.
- ನಿಮ್ಮ ಶಾಲಾ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಪ್ರಾರಂಭಿಸುವುದು.
- ಉತ್ತಮ ಹಾಗೂ ಧನಾತ್ಮಕ ಸಂಸ್ಕೃತಿಯನ್ನು ನಿಮ್ಮ ಶಾಲೆಯ ಕಲಿಕಾ ಪ್ರಕ್ರಿಯೆಯಲ್ಲಿ ಬೆಳೆಸುವ ತಂತ್ರಗಳು

# 1 ಶಾಲಾ ಸಂಸ್ಕೃತಿ ಎಂದರೇನು? ಮತ್ತು ಅದು ಕಲಿಕೆಯ ಮೇಲೆ ಹೇಗೆ ಪ್ರಭಾರ ಬೀರುತ್ತದೆ?

ಯಾವ ಶಾಲೆಯು ಉತ್ತಮ ಮೌಲ್ಯಗಳನ್ನು ಹಾಗೂ ಧನಾತ್ಮಕ ಸಂಸ್ಕೃತಿಯನ್ನು ಬೆಳೆಸುವಲ್ಲಿ ಶಕ್ತವಾಗಿದೆಯೋ ಆ ಶಾಲೆಯು, ಉತ್ತಮ ಕಲಿಕಾ ವಾತಾವರಣವನ್ನು ನಿರ್ಮಾಣ ಮಾಡುವ ಸಾಂಸ್ಕೃತಿಕ ಅಂಶಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುತ್ತದೆ. ಇಂತಹ ಶಾಲೆಯು ಪ್ರಜ್ಞಾಪೂರ್ವಕವಾಗಿಯೆ ಈ ಮೌಲ್ಯಗಳನ್ನು ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತದೆ. ಸಾಂಘಿಕ ಜಾಗೃತಿಯಿಂದ ಮತ್ತು ಕ್ರಿಯೆಗಳಿಂದ ಸಂಸ್ಕೃತಿಯನ್ನು ಧನಾತ್ಮಕವಾಗಿ ಶಾಲೆಯ ಕಲಿಕಾ ಪ್ರಕ್ರಿಯೆಯನ್ನು ಮತ್ತು ವಿದ್ಯಾರ್ಥಿಗಳ ಸಾಧನಾ ಕ್ಷಮತೆಯನ್ನು ವೃದ್ಧಿಗೊಳಿಸಲು ಬಳಸಬಹುದು. ಸಣ್ಣ ಪ್ರಮಾಣದ ಕ್ರಿಯೆಯಾದ ಸಾರ್ವಜನಿಕವಾಗಿ ಸಾಧನೆಗಳನ್ನು ಆಚರಿಸುವುದು ಅಥವಾ ದೊಡ್ಡ ಪ್ರಮಾಣದ ಕ್ರಿಯೆಯಾದ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಶಿಕ್ಷಕರಿಗಾಗಿ ಅಥವಾ ವಿದ್ಯಾರ್ಥಿಗಳಿಗಾಗಿ ಬೆಳೆಸುವದಾಗಿರಬಹುದು, ಪಠ್ಯಕ್ರಮವನ್ನು ಉತ್ತಮಗೊಳಿಸುವದಕ್ಕಾಗಿ ಏನಾದರೂ ಕೊಡುಗೆಯಾಗಿ ಕೊಡಬಹುದು.

ಸಂಸ್ಕೃತಿಯು ನಿಂತ ನೀರಿನಂತೆ ಅಚಲವಾಗಿ ತೋರಿದರೂ, ಅದು ಒಂದು ವಿಸ್ತಾರವಾದ ಆಯಾಮವುಳ್ಳ ಪ್ರಕ್ರಿಯೆ, ಅದು ಅನೇಕ ಅಂಶಗಳ ಪ್ರಭಾವಕ್ಕೆ ಒಳಗಾಗಿರುತ್ತದೆ. **ಉದಾ: ಕಾನೂನುಗಳು, ನೀತಿಗಳು ಮತ್ತು ನಾಯಕತ್ವದ ಬದಲಾವಣೆಗಳು** ಇದಕ್ಕಾಗಿಯೇ ಶಾಲಾ ನಾಯಕರು ಶಾಲಾ ಸಂಸ್ಕೃತಿಯ ಮೇಲೆ ಪ್ರಭಾವ ಬೀರುವ ಅಂಶಗಳು, ಬದಲಾವಣೆ ತರುಬಲ್ಲ ಅಂಶಗಳ ಬಗ್ಗೆ ಜಾಗೃತರಾಗಿರಬೇಕು. ಕಲಿಕೆಯ ಸಂಸ್ಕೃತಿ ಹಾಗೂ ಸಾಧನೆಗಳನ್ನು ಎಂದು ಪಣಕ್ಕಿಡಬಾರದು. ಸಂಶೋಧನೆಯು ಮುಖ್ಯವಾಗಿ ತಿಳಿಸುವದೇನೆಂದರೆ ಶಾಲಾ ಸಂಸ್ಕೃತಿಯು ವಿದ್ಯಾರ್ಥಿಗಳ ಸಾಧನೆಯಲ್ಲಿ ಮಹತ್ವದ ಪಾತ್ರವಹಿಸುವದೆಂದು, ಈ ವಿಷಯದಲ್ಲಿ ಶಾಲಾ ನಾಯಕರ ಪಾತ್ರ ಅತಿ ಅಮೂಲ್ಯ, ಬುಲ್ಯಾಚ ಅವರ ಪ್ರಕಾರ, ಒಬ್ಬ ನಾಯಕ, ಶಾಲಾ ಸಂಸ್ಕೃತಿಯನ್ನು ಬದಲಾವಣೆ ಮಾಡುವದಕ್ಕಿಂತ ಪೂರ್ವದಲ್ಲಿ ಅದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.
**ಒಂದು ಉತ್ತಮ ಶಾಲಾ ಸಂಸ್ಕೃತಿಯನ್ನು ವ್ಯಾಖ್ಯಾನಿಸಲು ಈ ಕೆಳಗಿನ ಅಂಶಗಳನ್ನು ಹೊಂದಿರಬೇಕು:**

- **ಸಾಮಾಜಿಕ ಪರಿಸರ,** ಸುರಕ್ಷಿತ ಹಾಗೂ ಕಾಳಜಿ ಇರುವ ಪರಿಸರ, ಇಂತಹ ಪರಿಸರದಲ್ಲಿ ವಿದ್ಯಾರ್ಥಿಗಳು ಆಹ್ವಾನಿತರಂತೆ ಹಾಗೂ ಗೌರವಾನ್ವಿತರಂತೆ ಭಾವಿಸುವುದು, ಶಾಲೆಯು ತಮ್ಮದು ಎಂಬ ಭಾವನೆ ಬರಬೇಕು. ಇದು ವಿದ್ಯಾರ್ಥಿಗಳ ನೈತಿಕ ಬೆಳವಣಿಗೆಯಲ್ಲಿ ಸಹಕಾರಿಯಾಗುತ್ತದೆ.
- **ಬೌದ್ಧಿಕ ಪರಿಸರ** ಈ ಪರಿಸರದಲ್ಲಿ ಎಲ್ಲ ವಿದ್ಯಾರ್ಥಿಗಳು ತಮ್ಮ ವರ್ಗ ಕೋಣೆಗಳಲ್ಲಿ ಉತ್ತಮ ಮೌಲ್ಯಗಳನ್ನು ಕಲಿತು ಉತ್ತಮವಾಗಿ ಕಾರ್ಯ ನಿರ್ವಹಿಸುವಂತೆ ಮಾಡುತ್ತದೆ. ಇದು ಉತ್ತಮವಾದ ಹಾಗೂ ನಿರಂತರವಾದ ಪಠ್ಯಕ್ರಮದಲ್ಲಿ ಅಳವಡಿಸಕೊಳ್ಳುವುದು ಆಗಿದೆ, ಇದಕ್ಕೆ ಪೂರಕವಾಗುವಂತಹ ಹಾಗೂ ಉತ್ತಮವಾದ ಬೋಧನಾ ವಿಧಾನವಿರಬೇಕು.
- **ಕಾನೂನುಗಳು ಮತ್ತು ನೀತಿಗಳು** ಇವು ಶಾಲೆಗೆ ಸಂಬಂಧಿಸಿದ ಎಲ್ಲ ವ್ಯಕ್ತಿಗಳನ್ನು ಉನ್ನತ ಮಟ್ಟದ ಕಲಿಕೆ ಹಾಗೂ ವರ್ತನಾ ಸಾಮರ್ಥ್ಯಗಳಿಗೆ ವಿಶ್ವಸ್ನೀಯರನ್ನಾಗಿ ಮಾಡುವವು.
- **ಸಂಪ್ರದಾಯಗಳು ಮತ್ತು ರೂಢಿಗಳು** ಮೌಲ್ಯಗಳಿಂದ ನಿರ್ಮಿತವಾದ ಇವು ಶಾಲೆಯ ಸಾಮಾಜಿಕ ಮತ್ತು ಪಠ್ಯ ವಿಷಯವನ್ನು ಇನ್ನಷ್ಟು ಮೌಲ್ಯಯುಕ್ತವಾಗಿ ಮಾಡಿ ಅವುಗಳನ್ನು ಪುನಃ ಸ್ಥಾಪಿಸುವುದು.
- **ಸ್ವರೂಪ** ಇದು ಶಾಲಾ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ವಿಚಾರಗಳ ಅಭಿವ್ಯಕ್ತಿಗೊಳಿಸುವುದರ ಸಲುವಾಗಿ ಮತ್ತು ಸಮಸ್ಯೆಗಳನ್ನು ಪರಿಹರಿಸುವ ಮತ್ತು ನಿರ್ಧಾರಂಶಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ತಿಳಿಸಿಕೊಡುವುದರಗೋಸ್ಕರ ಈ ಅಂಶಗಳು ಮುಖ್ಯವಾಗಿ ಶಾಲಾ ಪರಿಸರ ಮತ್ತು ಅವರ ಸಾಮಾನ್ಯ ಜೀವನದ ಮೇಲೆ ಪ್ರಭಾವ ಬೀರುವವು.
- **ಪಾಲಕರ ಜೊತೆಗೆ ಸೇರಿ ಉತ್ತಮವಾಗಿ ಕೆಲಸ ಮಾಡುವ ವಿಧಾನಗಳು** ಇದರ ಮುಖ್ಯ ಉದ್ದೇಶ ವಿದ್ಯಾರ್ಥಿಗಳ ಕಲಿಕೆಯನ್ನು ಪೂರೈಸುವುದು ಮತ್ತು ಅವರಲ್ಲಿ ಉತ್ತಮ ಚಾರಿತ್ರ್ಯ ನಿರ್ಮಾಣ ಮಾಡುವುದು.
- **ಸಂಬಂಧ ವೃದ್ಧಿಗೆ ಹಾಗೂ ನಡವಳಿಕೆಗಳಿಗೆ ನಡಾವಳಿಗಳು** ಇವುಗಳು ವೃತ್ತಿಪರತೆಯಲ್ಲಿ ಹೊಸ ಆಯಾಮ ಸಾಧಿಸಿ ಮೌಲ್ಯಯುಕ್ತ ವಾತಾವರಣ ನಿರ್ಮಾಣ ಮಾಡುವುದಗೋಸ್ಕರ.



**ಚಿತ್ರ 2 ನಿಮ್ಮ ಶಾಲೆಯು ಧನಾತ್ಮಕ ಶಾಲಾ ಸಂಸ್ಕೃತಿಯನ್ನು ಹೊಂದಿದೆಯೇ**

ಈ ವ್ಯಾಖ್ಯೆಯು ಶಾಲೆಯ ಉದ್ದಗಲವನ್ನು ಆವರಿಸಿಕೊಂಡಿದೆ ಇದರಲ್ಲಿ ಶಾಲೆಯ ಸಾಮಾಜಿಕ ಹಾಗೂ ಶೈಕ್ಷಣಿಕ ಅಂಶಗಳು ಒಳಗೊಂಡಿವೆ. ಈ ಹಿಂದೆ ಚರ್ಚಿಸಿದ ಪ್ರತಿಯೊಂದು ಅಂಶ ವಿದ್ಯಾರ್ತಿಯ ಕಲಿಕೆಯ ಮೇಲೆ ಪ್ರಭಾವ ಬೀರುತ್ತವೆ. ಅದು ಉತ್ಕೃಷ್ಟತೆಯ ಸಂಸ್ಕೃತಿಯನ್ನು ಬೆಳೆಸುವದಾಗಿರಬಹುದು ಅಥವಾ ವಿದ್ಯರ್ತಿಘಳಿಗೆ ತಮ್ಮ ಮಾತುಗಳು ಕೇಳಲ್ಪಟ್ಟಿವೆ ಎಂಬ ಭಾವನೆ ಬರುವುದಿರಬಹುದು. ಓ ಅ ಈ ಹೇಳುವ ಪ್ರಕಾರ ಶಾಲೆಯ ವಿದ್ಯಾರ್ಥಿಗಳ ಸಾಮಾಜೀಕರ್ಣ, ಸ್ವಾವಲಂಬನೆ ಗುಣ ಹೊಂದಿರುವುದು, ಸಂಪನ್ಮೂಲ ವ್ಯಕ್ತಿಗಳಾಗುವುದು ಶಾಂತಿ ಪಾಲಕರಾಗುವುದು ಮತ್ತು ಉತ್ತಮ ಆರೋಗ್ಯ ಪಡೆದುಕೊಳ್ಳುವುದರಲ್ಲಿ ಶಾಲೆಯ ಜವಾಬ್ದಾರಿ ಅತೀ ಮಹತ್ವದ್ದು.

ಓ ಅ ಈ ಹೇಳುತ್ತೆ ಪ್ರಜಾಪ್ರಭುತ್ವದಲ್ಲಿ ಪಾಲ್ಗೊಳ್ಳುವಿಕೆ ಅದರ ಉಳಿವಿಗಾಗಿ ಶ್ರಮಿಸುವುದು ಮತ್ತು ಅದನ್ನು ಪೋಷಿಸುವುದನ್ನು ವಿದ್ಯಾರ್ಥಿಗಳು ಅಷ್ಟು ಸುಲಭವಾಗಿ ಒಂದೇ ಪ್ರಯತ್ನದಲ್ಲಿ ತಿಳಿದುಕೊಳ್ಳುವಂತಹ ಸ್ಥಿತಿಯನ್ನು ನಿರ್ಮಾಣ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ.

ವಿಶೇಷವಾಗಿ ಅದರ ಬಗ್ಗೆ ಅವರಿಗೆ ಮೊದಲೇ ಸ್ವಲ್ಪವದರೂ ಅನುಭವ ಇರದೇ ಇದ್ದಲ್ಲಿ ಓ ಅ ಈ ಮುಖ್ಯವಾಗಿ ಈ ಕೆಳಗಿನ ಅಂಶಗಳ ಪ್ರಾಮುಖ್ಯತೆಯನ್ನು ತಿಳಿ ಹೇಳುತ್ತದೆ.

- ಓದುವ ಕುರಿತು ಸಂಸ್ಕೃತಿ
- ಅನ್ವೇಷಣೆ, ಜಿಜ್ಞಾಸೆ ಹಾಗೂ ಪ್ರಾಯೋಗಿಕ ಕಲಿಕೆಯ ಸಂಸ್ಕೃತಿ
- ವಿದ್ಯಾರ್ಥಿಗಳ ಸ್ಥಾನಮಾನವನ್ನು ಕಲಿಯುವವರು ಎಂದು ಬಿಂಬಿಸುವ ಸಂಸ್ಕೃತಿ ಮತ್ತು ಪ್ರತಿ ವಿದ್ಯಾರ್ಥಿಯ 5 ಶಕ್ತಿ ಹಾಗೂ ಅಭಿರುಚಿಗಳನ್ನು ಉತ್ತೇಜಿಸುವಂತಹ ಸಂಸ್ಕೃತಿ
- ವಿದ್ಯಾರ್ಥಿ ಶಿಕ್ಷಕರ ಅಂತರ ಸಂಬಂಧ ವಿಚಾರಗಳು, ಶಿಕ್ಷಕರ ಮನೋವೃತ್ತಿಗಳು ಮತ್ತು ಶಾಲೆಯ ಸಂಸ್ಕೃತಿಯ ಅಂಗಗಳಾಗಿರುವ ನಡಾವಳಿಗಳು ಮತ್ತು ಮೌಲ್ಯಗಳು.

ಇತ್ತೀಚಿಗೆ ಚಲಾವಣೆಯಲ್ಲಿ ಬಂದ Section 17 R T E ಗೆ ಸಂಬಂಧಿಸಿದಂತೆ ಇದು ಉತ್ತಮ ಹಾಗೂ ಧನಾತ್ಮಕ ಶಾಲಾ ಸಂಸ್ಕೃತಿಯ ನಿರ್ಮಾಣದಲ್ಲಿ ಉತ್ತಮ ಹಾಗೂ ಪ್ರಭಾವಿ ಅಂಶ. ಇದು ಹೇಳುವ ಪ್ರಕಾರ ಯಾವುದೇ ಮಗು ಶಾಲೆಯಲ್ಲಿ ದೈಹಿಕ ದಂಡನೆ ಅಥವಾ ಮಾನಸಿಕ ಕಿರುಕುಳಕ್ಕೆ ಒಳಗಾಗಬಾರದು. ಇದರ ಪ್ರಕಾರ ಶಾಲೆಯ ಒಂದು ಮಾರ್ಗದರ್ಶಿ ಪ್ರೋತ್ಸಾಹಿ ಸಂಸ್ಥೆಯಾಗಿ ಕಾರ್ಯನಿರ್ವಹಿಸಿ ವಿದ್ಯಾರ್ಥಿಗಳಿಗೆ ಒಂದು ಸ್ನೇಹದ ವಾತಾವರಣ ನಿರ್ಮಿಸಿ, ಮಗು ಕೇಂದ್ರಿತ ಶಿಕ್ಷಣವನ್ನು ಒದಗಿಸುವ ಸಂಸ್ಥೆಯಾಗಬೇಕು. ಇಲ್ಲಿ ಯಾವುದೇ ರೀತಿಯ ಒತ್ತಡಕ್ಕೆ ಅವಕಾಶವಿಲ್ಲ ಇದು ಒಂದು ರೀತಿಯಲ್ಲಿ ಶಿಸ್ತು, ದಂಡನೆ ಮತ್ತು ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧಗಳಲ್ಲಿ ಹೊಸ ಅರ್ಥದಲ್ಲಿ ವ್ಯಾಖ್ಯಾನಿಸುತ್ತದೆ. National Programme Design ಹಾಗೂ Culrriculum Frame work (2014) ಶಾಲಾ ನಾಯಕರ ಸಬಲೀಕರಣ ಹಾಗೂ ಕಾರ್ಯಕ್ಷಮತೆ ವೃದ್ಧಿಗೆ ಹೆಚ್ಚು ಒತ್ತಿಹೆಚ್ಚು ಉತ್ಸಾಹದಿಂದ ವಿದ್ಯಾರ್ಥಿಗಳನ್ನು ಪೋಷಿಸುವಂತಹ ಸಂಸ್ಥೆಯಾಗಿ ಅವರ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಸಕ್ರೀಯ ಪಾತ್ರವಹಿಸುತ್ತದೆ.

ಉತ್ತಮ ಹಾಗೂ ಧನಾತ್ಮಕ ಶಾಲಾ ಸಂಸ್ಕೃತಿಯ ನಿರ್ಮಾಣದಲ್ಲಿ ಶಾಲಾ ನಾಯಕರ ಪಾತ್ರ ಹಾಗೂ ಅವರ ಕಾರ್ಯವಿಧಾನ ತಿಳಿಯುವ ಪೂರ್ವದಲ್ಲಿ ಸಂಸ್ಕೃತಿಯ ವಿವಿಧ ಅಂಶಗಳು ಶಾಲಾ ಸಂಸ್ಕೃತಿಯ ಮೇಲೆ ಹೇಗೆ ಪ್ರಭಾವ ಬೀರುವವು ಎಂದು ತಿಳಿಯುವುದು ಅತೀ ಅವಶ್ಯ. **ಚಟುವಟಿಕೆ–1** ಶಾಲೆಯ ಸಂಸ್ಕೃತಿಯ ಬಗ್ಗೆ ನಿಮ್ಮ ತಿಳುವಳಿಕೆ ಮತ್ತು ಚಾರಿತ್ರ್ಯ ನಿರ್ಮಾಣ ಶಿಕ್ಷಣದ ವ್ಯಾಖ್ಯೆಯ ಜೊತೆಗಿನ ಸಂಬಂಧವನ್ನು ತಿಳಿಸುತ್ತದೆ.

## ಚಟುವಟಿಕೆ– 1 ಉತ್ತಮ ಶಾಲಾ ಸಂಸ್ಕೃತಿಯ ಉದಾಹಣರೆಗಳನ್ನು ಗುರುತಿಸುವುದು

ಮೇಲೆ ಪಟ್ಟಿ ಮಾಡಿದ ಶಾಲಾ ಸಂಸ್ಕೃತಿಗೆ ಸಂಬಂಧಿಸಿದ ಅ ಇ ಕ ಯಲ್ಲಿ 7 ಅಂಶಗಳನ್ನು ಮತ್ತೊಮ್ಮೆ ಓದಿ ಆ ಅಂಶಗಳು ನಿಮ್ಮ ಶಾಲೆಯಲ್ಲಿ ಹೇಗೆ ಪ್ರತಿಬಿಂಬಗೊಳ್ಳಬಹುದೆಂಬ ಎರಡು ಉದಾಹರಣೆಗಳನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ನಮೂದಿಸಿರಿ.

ನೀವು ಪಟ್ಟಿ ಮಾಡಿದ ಪ್ರತಿ ಉದಾಹರಣೆ, ನಿಮ್ಮ ಶಾಲೆಯ ವಿದ್ಯಾರ್ಥಿಗಳ ಕಲಿಕೆ ಮೇಲೆ ಹೇಗೆ ಧನಾತ್ಮಕ ಪರಿಣಾಮ ಬೀರುವುದೆಂದು ಸಮರ್ಥಿಸಬೇಕು. ನೀವು ನಿಮ್ಮ ಸ್ವಂತ ಅನುಭವಕ್ಕೆ ಬಂದ ಉದಾಹರಣೆಯನ್ನು ತೆಗೆದುಕೊಂಡಿರಬಹುದು, ಅಥವಾ ನಿಮ್ಮ ಶಾಲೆಯು ಅನುಷ್ಠಾನ ಮಾಡಲೇ ಬೇಕಾದ ನಡುವಳಿಕೆಯ ಉದಾಹರಣೆಗಳು ಇರಬಹುದು. ನೀವು ಕಂಡ ಆಯ್ದುಕೊಂಡಂತಹ ಉದಾಹರಣೆ ವಿದ್ಯಾರ್ಥಿಗಳಿಗೆ ಶಿಕ್ಷಕರ ಗುಡ್ ಮಾರ್ನಿಂಗ್ ಅಂತ ಹೇಳಿ ಆಧರಿಸುವಂತಹ ಸಣ್ಣ ಉದಾಹರಣೆ ಇರಬಹುದು ಅಥವಾ ವರ್ಗ ಕೋಣೆಯ ಬೋಧನಾ ವಿಧಾನವನ್ನು ಬದಲಾಯಿಸುವಂತಹ ದೊಡ್ಡ ಪ್ರಮಾಣದ ಉದಾಹರಣೆ ಇರಬಹುದು.

ನೀವು ಯೋಚಿಸಿರುವ ಉದಾಹರಣೆಗಳು ಹೆಚ್ಚು ಪರಿಕಲ್ಪನೆಗೆ ನಿರ್ಧಿಷ್ಟವಾಗಿವೆ ಎಂದು ತೋರುತ್ತಿದೆ. ಕೋಷ್ಟಕ 1 ರಲ್ಲಿ ಎಲ್ಲಕ್ಕೂ ಅನ್ವಯಿಸುವಂತಹ, ಪ್ರಾಯೋಗಿಕ ಅಂಶಗಳನ್ನು ವಿಶಾಲವಾಗಿ ಆಲೋಚಿಸಲು ನಿಮಗೆ ಸಹಾಯಕವಾಗುವಂತಹ ಹಾಗೂ ನಿಮ್ಮ ಶಾಲಾ ಸಂಸ್ಕೃತಿಗೆ ಕೊಡುಗೆಯನ್ನು ನೀಡಬಹುದಾದ ಕೆಲವು ಉದಾಹರಣೆಗಳನ್ನು ನೀಡಲಾಗಿದೆ.

## ಕೋಷ್ಟಕ 1 ಶಾಲಾ ಸಂಸ್ಕೃತಿಯ ಉದಾಹರಣೆಗಳು

| ಶಾಲಾ ಸಂಸ್ಕೃತಿಯ ವ್ಯಾಖ್ಯಾನ | ಉದಾಹರಣೆ |
|---|---|
| **ಸಾಮಾಜಿಕ ಪರಿಸರ** | • ವಿದ್ಯಾರ್ಥಿಗಳ ಕಾರ್ಯವನ್ನು ಪ್ರದರ್ಶಿಸುವುದು.<br>• ವಿದ್ಯಾರ್ಥಿಗಳು ವರ್ಗ ಕೋಣೆಯನ್ನು ಪ್ರವೇಶಿಸುತ್ತಲೆ ಅವರನ್ನು ಪ್ರೀತಿಯಿಂದ ಸ್ವಾಗತಿಸುವುದು.<br>• ಭಾವನಾತ್ಮಕ ಪ್ರೋತ್ಸಾಹ ಬೇಕಾಗುವ ವಿದ್ಯಾರ್ಥಿಗಳಿಗೆ ಅದನ್ನು ಒದಗಿಸುವುದು.<br>• ಸುರಕ್ಷಿತ ಹಾಗೂ ಮಗು ಸ್ನೇಹಿ ವಾತಾವರಣವನ್ನು ನಿರ್ಮಾಣ ಮಾಡುವುದು ಮುಖ್ಯವಾಗಿ ಸುಸಜ್ಜಿತ ಆಸನ ವ್ಯವಸ್ಥೆ<br>• ಶಾಲಾ ಸಿಬ್ಬಂದಿಯು ಯಾವುದೇ ವಿದ್ಯಾರ್ಥಿಯ ಬಗ್ಗೆ ಪೂರ್ವಾಗ್ರಹಪೀಡತರಾಗಿರದೆ ಮತ್ತು ಏಕರೂಪಾತ್ಮಕ ಬೋಧನಾ ವಿಧಾನ ಇರದಿರುವುದು.<br>• ವಿದ್ಯಾರ್ಥಿಗಳು ಯಾವುದೇ ಸಾಮಾಜಿಕ ಹಾಗೂ ಶೈಕ್ಷಣಿಕ ಹಿನ್ನಲೆಯಿಂದ ಬಂದಿದ್ದರೂ ಅವರನ್ನು ಎಲ್ಲರೊಡನೆ ಜೊತೆಗೂಡಿಸಿ ಅವರನ್ನು ಶಿಕ್ಷತರನ್ನಾಗಿ ಮಾಡಿ ಅವರಲ್ಲಿ ಸರ್ವಾಂಗೀಣ ಅಭಿವೃದ್ಧಿ ಮೂಡಿಸುವುದು. |
| **ಬೌದ್ಧಿಕ ಪರಿಸರ** | • ಯಶಸ್ಸನ್ನು ಪ್ರಶಂಸಿಸುವುದು. **ಉದಾ :** ಸಣ್ಣ ಪ್ರಮಾಣದಲ್ಲಿ ಹೇಳುವದಾದರೆ, ಒಳ್ಳೆದು, ಉತ್ತಮ, ಗುಡ್ ಎಂದ ಶಬ್ದಗಳಿಂದ ಹೊಗಳುವುದು ಅಥವಾ ಸಭೆ ಸಮಾರಂಭವನ್ನು ಆಯೋಜಿಸಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಪ್ರಧಾನ ಮಾಡಿ ಸನ್ಮಾನಿಸುವುದು.<br>• ವಿದ್ಯಾರ್ಥಿಗಳಿಗೆ ಕಲಿಕಾ ಗುರಿಗಳನ್ನು ಗುರುತಿಸುವುದು ಅವು ಹೇಗಿರಬೇಕೆಂದರೆ ಅವು ವಿದ್ಯಾರ್ಥಿಗಳ ಅವಶ್ಯಕತೆಗಳನ್ನು ಬಿಂಬಿಸುವಂಥವರಾಗಿರಬೇಕು ಮತ್ತು ವಿದ್ಯಾರ್ಥಿಗಳಿಗೆ ಉತ್ತಮ ಸವಾಲಾಗಿರಬೇಕು.<br>• ಕಲಿಕೆಯಲ್ಲಿ ಪ್ರಶ್ನಿಸುವುದನ್ನು ಶೋಧನಾ ಪ್ರವೃತ್ತಿಯನ್ನು ಪೋಷಿಸುವುದು. |
| **ಕಾಯ್ದೆಗಳು ಮತ್ತು ನೀತಿಗಳು** | • ಒಂದು ವರ್ತನಾ ನೀತಿಯನ್ನು ವಿದ್ಯಾರ್ಥಿಗಳೊಂದಿಗೆ ಸಮಾಲೋಚಿಸಿ ರೂಪಿಸುವುದು ಮತ್ತು ಇದನ್ನು ಪ್ರತಿ ವರ್ಗ ಕೋಣೆಯಲ್ಲಿ ಪ್ರದರ್ಶಿಸುವುದು.<br>• ಶಾಲಾ ಸಭೆಗಳಲ್ಲಿ ಈ ವರ್ತನಾ ನೀತಿಯ ಬಗ್ಗೆ ಶಾಲಾ ಆಡಳಿತ ಮಂಡಳಿಯವರ ಮತ್ತು ಶಿಕ್ಷಕರ ಉಪಸ್ಥಿತಿಯಲ್ಲಿ ಚರ್ಚಿಸುವುದು.<br>• ಎಲ್ಲ ಶಿಕ್ಷಕರು ಈ ವರ್ತನಾ ನೀತಿಯನ್ನು ಪಾಲಿಸುವಂತೆ ನೋಡಿಕೊಳ್ಳುವದು. |
| **ಪದ್ಧತಿಗಳು ಮತ್ತು ರೂಢಿಗಳು** | • ಪ್ರತಿ ಶಾಲಾ ಸಭೆಯಲ್ಲಿ ಶಾಲೆಯ ಯಶಸ್ವಿಗೆ ಸಂಬಂಧಿಸಿದ ಹಾಗೂ ವಿದ್ಯಾರ್ಥಿಗಳ ಯಶಸ್ಸನ್ನು ಆಚರಿಸುವ ಸಲುವಾಗಿ ಸ್ವಲ್ಪ ಸಮಯ ನಿಗದಿಗೊಳಿಸಬೇಕು.<br>• ಶಾಲಾ ಸಿಬ್ಬಂದಿ ಮತ್ತು ಆಡಳಿತ ಮಂಡಳಿಯವರು ಸೇರಿ ಶಾಲೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಸಂಘಟಿಸಿ (ಕ್ರೀಡೆ, ಪಾರಿತೋಷಕ ವಿತರಣೆ) ಅವುಗಳಲ್ಲಿ ಹಾಜರಿದ್ದು ವಿದ್ಯಾರ್ಥಿಗಳನ್ನು ಪೋಷಿಸಬೇಕು. |
| **ಶಾಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಭಾವನೆಗಳಿಗೆ ಧ್ವನಿ ಕೊಡುವುದು** | • ಪ್ರತಿವಾರ ಶಾಲೆಯ ಸಿಬ್ಬಂದಿಗೆ ಹಾಗೂ ವಿದ್ಯಾರ್ಥಿಗಳು ಶಾಲಾ ನಾಯಕರನ್ನು ಯಾವಾಗಬೇಕಾದರೂ ಭೇಟಿಯಾಗುವ ಅವಕಾಶ ವಿದ್ಯಾರ್ಥಿ ಒಕ್ಕೂಟ ಅಥವಾ ಸಾಮಾಜಿಕ ಸಂಸ್ಥೆಯನ್ನು ರಚಿಸುವುದು ಮತ್ತು ಈ ಸಂಸ್ಥೆಯಲ್ಲಿ ವಿದ್ಯಾರ್ಥಿಗಳು ತಮ್ಮ ಸಿಬ್ಬಂದಿಯೊಂದಿಗೆ ಚರ್ಚಿಸಬಯಸುವ ವಿಷಯಗಳನ್ನು ಮುಕ್ತವಾಗಿ ಚರ್ಚಿಸಬಹುದು.<br>• ವಿದ್ಯಾರ್ಥಿಗಳು ತಮ್ಮ ಬೇರೆ ಬೇರೆ ವಿಷಯಗಳ ಕಲಿಕಾ ಅನುಭವವನ್ನು ಮೌಲ್ಯಮಾಪನ ಮಾಡಿಕೊಳ್ಳುವಂತೆ ತಿಳಿಸಿಕೊಡುವುದು ಅಥವಾ ತಮ್ಮ ವರ್ಷ ಪೂರ್ತಿ ಕಲಿಕಾ ಅನುಭವದ ಮೌಲ್ಯಮಾಪನ ಮಾಡಿಕೊಳ್ಳುವಂತೆ ತಿಳಿಸಿಕೊಡುವುದು ಈ ಮೌಲ್ಯಮಾಪನದಿಂದ ಉತ್ತಮ ಬದಲಾವಣೆಗಳನ್ನು ತರಲು ಉಪಯೋಗವಾಗುತ್ತದೆ. |
| **ಪಾಲಕರ ಜೊತೆಗೂಡಿ ಕಾರ್ಯ ನಿರ್ವಹಣೆ** | • ಪಾಲಕರು ಶಾಲಾ ಸಿಬ್ಬಂದಿಯೊಂದಿಗೆ ಮುಕ್ತವಾಗಿ ತಮಗೆ ಅಗತ್ಯವೆನಿಸಿದ ವಿಷಯಗಳ ಕುರಿತು ಮುಕ್ತವಾಗಿ ಚರ್ಚಿಸಲು ಅವಕಾಶ ಮಾಡಿಕೊಡುವುದು.<br>• R T E 2009 ರ ಆದೇಶದಂತೆ ಕಡ್ಡಾಯವಾಗಿ ಪಾಲಕರನ್ನು ಶಾಲಾ ಆಡಳಿತ ಮಂಡಳಿಯಲ್ಲಿ ಸೇರಿಸಿಕೊಳ್ಳುವುದು.<br>• ಕಾಲ ಕಾಲಕ್ಕೆ ಪಾಲಕರಿಗೆ ತಮ್ಮ ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ತಿಳಿಸುವುದು ಅದರ ಜೊತೆಗೆ ಶಲಾ ಯಶಸ್ಸಿನ ಕಾರ್ಯಕ್ರಮಗಳ ಬಗ್ಗೆಯು ತಿಳಿಸುವುದು. |

| ಶಾಲಾ ಸಂಸ್ಕೃತಿಯ ವ್ಯಾಖ್ಯಾನ | ಉದಾಹರಣೆಗಳು |
|---|---|
| **ಸಂಬಂಧ ಹಾಗೂ ನಡುವಳಿಕೆಯ ಕುರಿತಾಗಿ ನೀತಿಗಳು** | • ಶಿಕ್ಷಕರು ಸಹ ವಿದ್ಯಾರ್ಥಿಗಳ ಜೊತೆ ಮಾಡನಾಡುವಾಗ "ದಯವಿಟ್ಟು" ಮತ್ತು "ಧನ್ಯವಾದ" ಎಂಬ ಶಬ್ದಗಳನ್ನು ಮುಖ್ಯವಾಗಿ ಬಳಸಬೇಕು.<br>• ಪ್ರತಿ ವಿದ್ಯಾರ್ಥಿಯ ಮಾತೃಭಾಷೆಯನ್ನು ಆಧರಿಸುವುದು ಮತ್ತು ಗೌರವಿಸುವುದು.<br>• ವಿವಿಧ ಹಂತಗಳಲ್ಲಿ ವಿದ್ಯಾರ್ಥಿಗಳ ವಿವಿಧ ಸಾಮರ್ಥ್ಯಗಳನ್ನು ಗೌರವಿಸುವುದು ಮತ್ತು ಏನಾದರೂ ನ್ಯೂನ್ಯತೆ ಇದ್ದಲ್ಲಿ ಅದನ್ನು ಎಲ್ಲರ ಜೊತೆ ಸೇರಿ, ಸರಿಪಡಿಸಬೇಕು ಆ ನ್ಯೂನ್ಯತೆಯನ್ನು ಕಾರಣವಾಗಿಟ್ಟುಕೊಂಡು ಆ ಅಭ್ಯರ್ಥಿಯನ್ನು ದೂರವಿಡಬಾರದು.<br>• ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಗೌರವಿಸುವುದು ಅವರ ಕೋರಿಕೆಗಳನ್ನು ಆಲಿಸುವುದು ಎಲ್ಲ ಸಂಪನ್ಮೂಲಗಳನ್ನು ಸಮಾನವಾಗಿ ತಲುಪಿಸುವುದು. |

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಶಾಲಾ ಸಂಸ್ಕೃತಿಯು ಒಂದು ಬಹುಮುಖ್ಯ ಸ್ವರೂಪದ್ದಾಗಿದ್ದು ಶಾಲಾ ಸಿಬ್ಬಂದಿ, ವಿದ್ಯಾರ್ಥಿಗಳ ಕಲಿಕೆಯ ಮೇಲೆ ಅತ್ಯಂತ ಪ್ರಭಾವಿಯಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ತಿಳಿದು ಬರುತ್ತದೆ. ಶಾಲಾ ನಾಯಕರಾದವರು ಈ ಎಲ್ಲ ಗಮನದಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸಬೇಕು ಮತ್ತು ಯೋಜನೆಯನ್ನು ರೂಪಿಸಿ ಉದ್ದೇಶಿತ ಸಂಸ್ಕೃತಿಯನ್ನು ಸ್ಥಾಪಿಸಬೇಕು.

# 2 ಶಾಲಾ ನಾಯಕತ್ವದ ಶೈಲಿಗಳು

NCF ಹಾಗೂ CEP ಪ್ರಕಾರ ಸಂಸ್ಕೃತಿಯನ್ನು ಕೇವಲ ಕೈಗೊಂಡ ಕ್ರಿಯೆಗಳಿಂದ ಸ್ಥಾಪಿಸಲು ಸಾಧ್ಯವಿಲ್ಲ, ಅದರ ಜೊತೆಗೆ ಸಂಬಂಧಗಳ ಪ್ರಭಾವವು ಅತೀ ಮುಖ್ಯವಾಗಿರುತ್ತದೆ ಮುಂದಿನ ಚಟುವಟಿಕೆಯು ಶಲಾ ಸಂಸ್ಕೃತಿಯ ಮೇಲೆ ವಿವಿಧ ಶೈಲಿಯ ನಾಯಕತ್ವದ ಪ್ರಭಾವ ತಿಳಿಸಿಕೊಡುತ್ತದೆ.

## ಚಟುವಟಿಕೆ– 2 ನಾಯಕತ್ವದ ಶೈಲಿಗಳು

2 ನೇ ಕೋಷ್ಟಕದಲ್ಲಿ ಕೊಟ್ಟಿರುವ ಎಲ್ಲಾ ನಾಯಕರ ಗುಣಗಳ ಬಗ್ಗೆ ಓದಿರಿ, ನಿಮ್ಮ ಶಾಲಾ ಹಂತದಿಂದ ಇಲ್ಲಿಯವರೆಗೆ ನೀವು ನೋಡಿ ತಿಳಿದುಕೊಂಡಂತಹ ಶಾಲಾ ನಾಯಕರ ಬಗ್ಗೆ ಯೋಚಿಸಿ ಅಥವಾ ನಿಮ್ಮ ಗುಂಪಿನ ನಾಯಕರ ಬಗ್ಗೆ ಯೋಚಿಸಿ 2ನೇ ಕೋಷ್ಟಕದ ಯಾವ ಅಂಶ ಅವರಿಗೆ ಹೊಂದುವುದನ್ನು ಗುರುತಿಸಿ ಮತ್ತು ನಿಮ್ಮಲ್ಲಿ ಯಾವ ಅಂಶ ಕಾಣುವಿರೆಂದು ಗುರುತಿಸಿ ನಿಮ್ಮ ಟಿಪ್ಪಣಿಗಳನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ಬರೆಯಿರಿ.

ಕೋಷ್ಟಕ 2 ನಾಯಕತ್ವದ ಶೈಲಿಗಳು Table 2 Leadership styles.

| | | ಸಂಬಂಧ ಆಧಾರಿತ ನಾಯಕ | |
|---|---|---|---|
| | | **ಉನ್ನತ** | **ಕನಿಷ್ಠ /ಕಡಿಮೆ** |
| **ಕಾರ್ಯ ಕೇಂದ್ರಿತ ನಾಯಕ** | **ಉನ್ನತ** | ನಾಯಕರು ತನ್ನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪ್ರಗತಿ ಮತ್ತು ಅಭಿವೃದ್ಧಿಯಲ್ಲಿ ಹೆಚ್ಚು ಆಸಕ್ತಿಯನ್ನು ಹೊಂದಿರುವರು. ಇವರು ಹೆಚ್ಚು ತರಗತಿಯಲ್ಲಿ ಇರುವರು, ಬೋಧನೆ ಮತ್ತು ಕಲಿಕೆಯನ್ನು ಮುನ್ನಡೆಸುವರು, ಉತ್ತಮ ಅಭ್ಯಾಸಗಳನ್ನು ಮಾದರೀಕರಿಸುವರು, ಮತ್ತು ವಿದ್ಯಾರ್ಥಿಗಳಿಗೆ ಬೆಂಬಲವನ್ನು ನೀಡುವರು. ಇವರು ತಮ್ಮ ಕೆಲಸವನ್ನು ಆಳವಾದ ಆಸಕ್ತಿಯಿಂದ ಮಾಡುವರು, ಸರಿಯಾಗಿ ಮತ್ತು ಸಮಯದೊಳಗೆ ಮಾಡುವರು, ಮತ್ತು ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ನಿರ್ಧಾರ ತೆಗೆದೊಕೊಳ್ಳುವಲ್ಲಿ ಭಾಗಿಯಾಗಿರುವುದನ್ನು ಖಾತರಿ ಪಡಿಸಿಕೊಳ್ಳುವರು. ಪ್ರತಿಯೊಬ್ಬರೂ ನಾಯಕರು ಅರಿವನ್ನು ಹೊಂದಿದ್ದಾರೆ ಮತ್ತು ತಾವು ಉತ್ತಮವಾಗಲು ಬೆಂಬಲವನ್ನು ನೀಡುತ್ತಿದ್ದಾರೆ ಎಂದು ಭಾವಿಸುವರು. | ನಾಯಕರು ನೀಡಿದ ಕೆಲಸವನ್ನು ಪರಿಪೂರ್ಣವಾಗಿ ಮತ್ತು ನೀಡಿದ ಸಮಯದೊಳಗೆ ಪೂರ್ಣಗೊಳಿಸುವುದಕ್ಕೆ ಹೆಚ್ಚು ಗಮನವನ್ನು ನೀಡುವರು. ತಾವು ತೆಗೆದುಕೊಂಡಿರುವ ನಿರ್ಧಾರಗಳಿಗೆ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಸಮ್ಮತಿಯಿದೆಯೇ ಎಂದು ತಿಳಿಯುವುದು ಸಮಯವನ್ನು ವ್ಯರ್ಥಮಾಡುವುದು ಹಾಗೂ ಇದು ಅವರ ಕೆಲಸವೆಂಬಂತೆ ನೋಡುವರು. ಇವರು ತರಗತಿಗೆ ಪ್ರವೇಶಿಸಿದಲ್ಲಿ ಶಿಕ್ಷಕರನ್ನು ಉತ್ತಮಗೊಳಿಸುವುದಕ್ಕೆ ಬೆಂಬಲಿಸುವ ಬದಲು ಕಾರ್ಯವನ್ನು ಪೂರ್ಣಗೊಳಿಸಲು ತೆಗೆದುಕೊಂಡ ಸಮಯದ ಬಗ್ಗೆಯೇ ಹೆಚ್ಚು ಆಸಕ್ತಿಯನ್ನು ವಹಿಸುವರು;ಹೆಚ್ಚು ಬಾರಿ ಶಿಕ್ಷಕರಿಂದ ನಿಗದಿತ ಸಮಯಕ್ಕಿಂತ ಹೆಚ್ಚು ಕೆಲಸ ಮಾಡುವಂತೆ ಮಾಡುವರು, ಶಿಕ್ಷಕರಿಗಿಂತ ಇವರು ಚೆನ್ನಾಗಿ ಬೋಧಿಸುವ ಸಾಮರ್ಥ್ಯ ಹೊಂದಿರುವುದರಿಂದ, ಶಿಕ್ಷಕರು ಇತರರಿಂತ ತಾವು ಉತ್ತಮ ಎಂದು ಸಾಬೀತುಪಡಿಸಬೇಕೆಂದು ಭಾವಿಸುವರು. |
| | **ಕನಿಷ್ಠ /ಕಡಿಮೆ** | ನಾಯಕರು ಶಿಕ್ಷಕ ಮತ್ತು ವಿದ್ಯಾರ್ಥಿಗಳೊಂದಿಗೆ ಸಾಮಾಜಿಕವಾಗಿ ಹೆಚ್ಚು ಸಮಯವನ್ನು ಕಳೆಯಲು ಹೆಚ್ಚು ಆಸಕ್ತಿಯನ್ನು ಹೊಂದಿರುವರು. ಅವರು ಎದುರಿಸುವ ಸಮಸ್ಯೆಗಳ ಬಗ್ಗೆ ಸಹಾನುಭೂತಿಯನ್ನು ಹೊಂದಿರುವರು ಆದರೆ ಸಿಬ್ಬಂದಿಗಳೊಂದಿಗೆ ಮಾಡಬೇಕಾದ ಕಾರ್ಯಚಟುವಟಿಕೆಗಳ ಬಗ್ಗೆ | ನಾಯಕರು ತಮ್ಮಷ್ಟಕ್ಕೆ ತಾವು ಇರುತ್ತಾರೆ, ಮತ್ತು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪ್ರಗತಿ, ಅಭಿವೃದ್ಧಿಯ ಕಡೆಗೆ ಹೆಚ್ಚು ಆಸಕ್ತಿಯನ್ನು ನೀಡದೇ, ಕಾರ್ಯವನ್ನು ಪೂರ್ಣಗೊಳಿಸಿ, ಸಲ್ಲಿಸುವ ಬಗ್ಗೆ ಗಮನವೀಯುತ್ತಾರೆ. ಹೆಚ್ಚು ಮಿತವಾದ ಪರಸ್ಪರ ಸಾಮಾಜಿಕ ಸಂವಹನ ಸೀಮಿತವಾಗಿದ್ದು ಮತ್ತು ಕೆಲಸಗಳು ಕನಿಷ್ಠ ರೀತಿಯಲ್ಲಿ ನಡೆಯುತ್ತವೆ. ಪ್ರತಿಯೊಬ್ಬರೂ |

| | | | |
|---|---|---|---|
| | | ಚರ್ಚಿಸುವುದಕ್ಕೆ ಪ್ರಾಧಾನ್ಯತೆಯನ್ನು ನೀಡುತ್ತಾರೆ. ಹೆಚ್ಚು ವಿವರಗಳಿಗೆ ಗಮನವನ್ನು ಕೇಂದ್ರೀಕರಿಸದೇ ಕಾರ್ಯವನ್ನು ಪೂರ್ಣಗೊಳಿಸುವುದು ಎಂಬ ಅಭಿಪ್ರಾಯದೊಂದಿಗೆ ಕಾರ್ಯನಿರ್ವಹಿಸುತ್ತಾರೆ. ಪ್ರತೊಯೊಬ್ಬರೂ ನಾಯಕ ತಮ್ಮನ್ನು ಇಷ್ಟಪಡುತ್ತಾರೆ ಎಂದು ಭಾವಿಸುತ್ತಾರೆ. | ನಾಯಕನಿಗೆ ತಮ್ಮ ಸಾಮರ್ಥ್ಯದ ಬಗ್ಗೆ ತಿಳಿದಿಲ್ಲ ಎಂದು ಭಾವಿಸುತ್ತಾರೆ. |

ಸಹಜವಾಗಿ ಈ ಚಟುವಟಿಕೆಯು ವಿವಿಧ ಬಗೆಯ ನಾಯಕತ್ವ ಶೈಲಿಗಳ ಬಗ್ಗೆ ಪ್ರಾಥಮಿಕ /ಮೂಲ ಮಾಹಿತಿಯನ್ನು ಒದಗಿಸುತ್ತದೆ. ವಾಸ್ತವ ಜೀವನದಲ್ಲಿ ಕಾರ್ಯ ಮತ್ತು ಸಂಬಂಧ ಆಧಾರಿತ ಅಕ್ಷಗಳು, ಕೋಷ್ಟಕ 2ರ ಒಂದು ಭಾಗದಲ್ಲಿ ನೀಡಿರುವ ಲಕ್ಷಣಗಳನ್ನು ಕೆಲವೇ ಕೆಲು ಮಂದಿ ಅನುಸರಿಸುತ್ತಾರೆ /ಪ್ರಾತ್ಯಕ್ಷೀಕರಿಸುತ್ತಾರೆ ಎಂದಿ ವಿಶ್ಲೇಷಿಸುತ್ತದೆ. ಹಾಗಿದ್ದರೂ, ಈ ಮೇಲೆ ಕೋಷ್ಟಕದಲ್ಲಿ ನೀಡಿರುವ ನಾಯಕರ ನಾಲ್ಕು ಶೈಲಿಗಳ ಬಗ್ಗೆ ವ್ಯಕ್ತವಾಗಿರುವ ವಿವರಣೆಯ ಬಗ್ಗೆ ಮಾಡಿದಲ್ಲಿ ಪ್ರಕರಣ 1 ರಲ್ಲಿ ವಿವರಿಸಿದಂತೆ ಶಾಲಾ ಸಂಸ್ಕೃತಿಯ ಬಗ್ಗೆ ಚಿಂತನೆ ಮಾಡಲು ಉಪಯುಕ್ತಕಾರಿಯಾಗಿದೆ.

## ಅಧ್ಯಯನ–1 ವಿಭಿನ್ನ ಶೈಲಿಗಳ ನಾಲ್ಕು ಶಾಲಾ ನಾಯಕರು

### ಶ್ರೀಮತಿ ಬಾಲಸುಬ್ರಮಣ್ಯಂ

ಇವರು ಪಾಲಕರ ಮೆಚ್ಚುಗೆಗೆ ಪಾತ್ರರಾದವರು ಮತ್ತು ಬಹಳಷ್ಟು ಪಾಲಕರು ಇವರ ಮುಕ್ತ ಮಾತನಾಡುವ ರೀತಿಯನ್ನು ಮೆಚ್ಚಿದ್ದಾರೆ ಇವರು ಕಾಲ ಕಾಲಕ್ಕೆ ಪಾಲಕರನ್ನು ಕರೆದು ಉಪಯುಕ್ತ ಮಾಹಿತಿಯನ್ನು ನೀಡುತ್ತಾರೆ ಮತ್ತು ಶಾಲೆಯಲ್ಲಿ ಬದಲಾವಣೆ ತರಲು ಅವರ ವಿಚಾರಗಳಿಗೆ ಕಿವಿಗೊಡುತ್ತಾರೆ ಈ ಪಾಲಕರ ಮಕ್ಕಳು ತಮ್ಮ ಪಾಲಕರಿಗೆ ಶಾಲೆಯ ಅವ್ಯವಸ್ಥೆಯ ಬಗ್ಗೆ ಮತ್ತು ಶಾಲೆಯಲ್ಲಿನ ಪುಂಡ ಹುಡುಗರ ಬಗ್ಗೆ ದೂರು ನೀಡುತ್ತಿದ್ದರು

ಇದು ಈಗ ಸುಧಾರಿಸಿದೆ ಏಕೆಂದರೆ ಬಾಲಸುಬ್ರಮಣ್ಯಂನವರು ಶಾಲಾ ಒಕ್ಕೂಟವನ್ನು ರಚಿಸಿ ವಿವಿಧ ವಿದ್ಯಾರ್ಥಿಗಳಿಗೆ ವಿವಿಧ ಜವಾಬ್ದಾರಿಗಳನ್ನು ಕೊಟ್ಟಿದ್ದಾರೆ. ಈ ಜವಾಬ್ದಾರಿಗಳನ್ನು ಕೊಡುವಾಗ ಅವರು ಯಾವುದೇ ಬೇಧ ಮಾಡದೇ ಎಲ್ಲ ಮಟ್ಟದ ವಿದ್ಯಾರ್ಥಿಗಳನ್ನು ಸೇರಿಸಿ ಜವಾಬ್ದಾರಿಗಳನ್ನು ನೀಡಿದರು. ಇವರು ತಮ್ಮ ಶಾಲೆಯ ಪ್ರತಿ ವಿದ್ಯಾರ್ಥಿಯ ಹೆಸರನ್ನು ಬಲ್ಲವರು ಆಗಿದ್ದರು ಮತ್ತು ತಮ್ಮ ಸಿಬ್ಬಂದಿಯವರ ಹೆಸರನ್ನು ಸಹ ತಿಳಿದವರು ಆಗಿದ್ದರು. ಈ ಕಾರಣದಿಂದ ಶಾಲಾ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಲ್ಲಿ ಬಾಲಸುಬ್ರಮಣ್ಯಂ ಅವರಿಗಾಗಿ ವಿಶೇಷ ಗೌರವ ಹಾಗೂ ನಂಬಿಕೆ ಇತ್ತು. ತಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗಬಹುದು ಎಂಬ ವಿಶ್ವಾಸ ಇತ್ತು ಮತ್ತು ಸುಬ್ರಮಣ್ಯಂ ರವರು ತಮ್ಮ ವಿದ್ಯಾರ್ಥಿ ಮತ್ತು ಸಿಬ್ಬಂದಿ ಅವರ ಮೇಲೆ ವಿಶ್ವಾಸ ಉಳ್ಳವರು ಆಗಿದ್ದರು. ಇವರ ಉತ್ತಮ ಕಾರ್ಯ ಹಾಗೂ ಉತ್ತಮ ಸಂಬಂಧ ಹೊಂದಿದ್ದಾರೆ.

### ಶ್ರೀಮತಿ: ದಾಸ ಗುಪ್ತಾ

ಇವರು ಒಬ್ಬ ನಿಷ್ಠಾವಂತ ಶಾಲಾ ನಾಯಕರು ಮತ್ತು ತುಂಬಾ ಅಚ್ಚುಕಟ್ಟಾಗಿ ತಮ್ಮ ಜವಾಬ್ದಾರಿಗಳನ್ನು ನಿವೇದಿಸುವವರು. ಒಂದು ಒಳ್ಳೆಯ ಕೆಲಸ ಆಗಬೇಕು ಎಂದರೆ ಅದು ತಾವಾಗಿಯೇ ಮಾಡಬೇಕೆಂದು ತಿಳಿದವರು. ಶಾಲೆಯ ಹೇಗೆ ಬೆಳೆಯಬೇಕೊ ಎಂಬುದರ ಸ್ಪಷ್ಟ ಚಿತ್ರಣ ಇದ್ದು ವಿದ್ಯಾರ್ಥಿಗಳು ಹೇಗೆ ಕಲಿಯಬೇಕು ಮತ್ತು ಶಿಕ್ಷಕರು ಏನು ಕಲಿಸಬೇಕು ಎಂಬುದರ ಸ್ಪಷ್ಟ ಚಿತ್ರಣ ಅವರಲ್ಲಿ ಇದೆ. ದಾಸಗುಪ್ತಾ ಅವರ ಸಿಬ್ಬಂದಿಯವರು ಸಂಸ್ಥೆಗಾಗಿ ಶ್ರಮವಹಿಸಿ ದುಡಿದರು. ದಾಸಗುಪ್ತಾ ಅವರನ್ನು ಒಳ್ಳೆಯ ಸಹಕಾರ ನೀಡುವವರು ಎಂದು ಭಾವಿಸುವದಿಲ್ಲಾ ಇವರ ಸಭೆಗಳಲ್ಲಿ ಸುಧಾರಣೆಗಳನ್ನು ಸೂಚಿಸುವದು ಸ್ವಲ್ಪ ಕ್ಲಷ್ಟ ಏಕೆಂದರೆ ಸಿಬ್ಬಂದಿಯವರ ಪ್ರಕಾರ ದಾಸಗುಪ್ತಾ ಅವರು ತಮ್ಮ ಸಿಬ್ಬಂದಿಯನ್ನು ನಂಬುವದಿಲ್ಲಾ. ವಿದ್ಯಾರ್ಥಿಯು ಸಹ ತಮ್ಮನ್ನು ತಾವು ದಾಸಗುಪ್ತಾ ಅವರಿಂದ ದೂರ ಕಾಣಿಸಿಕೊಳ್ಳುತ್ತಾರೆ ಮತ್ತು ತಮ್ಮಲ್ಲಿ ದಾಸಗುಪ್ತಾ ಅವರಿಗೆ ಯಾವುದೇ ಅಭಿರುಚಿ ಇಲ್ಲಾ ಎಂದು ತಿಳಿದಿರುತ್ತಾರೆ. ದಾಸಗುಪ್ತಾ ಅವರು ಉತ್ತಮ ಮಟ್ಟದ ಕಾರ್ಯ ಆದರೆ ಕೆಳಮಟ್ಟದ ಸಂಬಂಧ ವ್ಯವಸ್ಥೆ.

### ಶ್ರೀಮತಿ: ಹಾಲದಾರ

ಇವರು ಪ್ರತಿಯೊಬ್ಬರ ಅಭಿಪ್ರಾಯವನ್ನು ಜಾಗರುಕತೆಯಿಂದ ಕೇಳುತ್ತಾರೆ ಇವರು ಪಾಲಕರು ಕೊಟ್ಟ ಹಿಂಮಾಹಿತಿಯನ್ನು ಹೇಗೆ ಸಾಧಿಸುವುದು ಮತ್ತು ನೆರೆಯವರು ಕೊಟ್ಟ ದೋರಗಳ ಬಗ್ಗೆ ಹೇಗೆ ಚರ್ಚಿಸುವುದು ಎಂಬುದರ ಬಗ್ಗೆ ಚಿಂತಿಸುತ್ತಾರೆ ಇತ್ತೀಚೆಗೆ ಒಬ್ಬ ಶೈಕ್ಷಣಿಕ ಅಧಿಕಾರಿ ಅವರ ಶಾಲೆಯ ಬಗ್ಗೆ ಮಾಡಿದ ಟಿಪ್ಪಣಿಯಿಂದ ಅವರು ಚಿಂತಾಕ್ರಾಂತರಾಗಿದ್ದರು. ತಕ್ಷಣ ಅವರು ಆ ಲೋಪವನ್ನು ಸರಿಪಡಿಸಲು ಶಿಕ್ಷಕರನ್ನು ನೇಮಿಸಿದರು ಮುಂದೆ ಆ ಅಧಿಕಾರಿ ಬಂದಾಗ ಆ ಬದಲಾವಣೆಯನ್ನು ಗಮನಿಸಲಿಲ್ಲಾ ಆದ್ದರಿಂದ ಹಾಲದಾರ ಅವರಿಗೆ ಬೇಸರಮಾಡಿತು.

ಹಾಲದಾರ ಅವರು ಯಾರನ್ನು ನಿರಾಶಿಸಲು ಬಯಸುವವರು ಅಲ್ಲಾ, ಕೆಲವೊಮ್ಮೆ ಅವರ ಈ ಪ್ರವೃತ್ತಿಯಿಂದ ಅವರು ಮಾಡಬೇಕಾದ ಮುಖ್ಯ ಕಾರ್ಯವನ್ನು ಮರೆತು ಜನರನ್ನು ಓಲೈಸುವದರಲ್ಲಿಯೇ ಸಮಯ ಹೋಗುತ್ತದೆ.

ವಿದ್ಯಾರ್ಥಿಗಳ ಬಗ್ಗೆ ಬಹಳಷ್ಟು ಪ್ರೀತಿ ಹಾಗೂ ಸಹಾನುಭೂತಿ ಇದ್ದು ಅವರ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾದಷ್ಟು ಸಮಯ ಕೊಡಲು ಬಯಸುತ್ತಾರೆ. ವಿದ್ಯಾರ್ಥಿಗಳು ಬಡ ಕುಟುಂಬಗಳಿಂದ ಬರುವವರಾಗಿದ್ದು ಶಾಲೆಯ ಸಂಪನ್ಮೂಲಗಳು ನಿಯಮಿತವಾಗಿದ್ದು ತಮ್ಮಿಂದ ಏನೂ ಹೆಚ್ಚು ಮಾಡಲು ಸಾಧ್ಯವಿಲ್ಲಾ ಎಂದು ತಿಳಿಯುತ್ತಾರೆ. ಹಾಲವಾರ ಅವರದು ಕೆಳಮಟ್ಟದ ಕಾರ್ಯ ಪದ್ಧತಿ ಆದರೆ ಉತ್ತಮ ಸಂಬಂಧ ವ್ಯವಸ್ಥೆ.

### ಶ್ರೀ: ಮಾಗಾರ

ಇವರು ತಾವು ಒಂದು ಉತ್ತಮ ಶಾಲೆಯನ್ನು ನಡೆಸುವವರು ಎಂದು ತಿಳಿದಿದ್ದಾರೆ ಇವರು ತಮ್ಮ ಕೋಣೆಯಲ್ಲಿ ಕುಳಿತುಕೊಳ್ಳದೇ ಪ್ರತಿ ವರ್ಗ ಕೋಣೆಗೆ ಭೇಟಿ ಕೊಟ್ಟು ಶಿಕ್ಷಕರನ್ನು ಪ್ರಶ್ನಿಸುತ್ತಾರೆ ಮತ್ತು ಕರಿಸಿಕೊಳ್ಳುತ್ತಾರೆ ಇವರು ಸಿಬ್ಬಂದಿಗಳೊಡನೆ ಸಭೆಗಳನ್ನು ಕರೆಯುವದಿಲ್ಲಾ ಮತ್ತು ಅವು ಕೊನೆಯ ಕ್ಷಣದಲ್ಲಿ ರದ್ದಾಗುತ್ತದೆ. ಸಿಬ್ಬಂದಿಯವರು ತಮ್ಮಲ್ಲಿಯ ಸಂಘಟನೆಯನ್ನು ಮಾಡಿಕೊಂಡು ವಿಚಾರ ವಿನಿಮಯ ಮಾಡಿಕೊಳ್ಳುತ್ತಾರೆ ಕೆಲ ಸಿಬ್ಬಂದಿಯವರು ಮಾಗಾರ ಅವರು ತಮಗೆ ಸಹಾಯ ಬೇಕು ಎಂದು ಬಯಸುತ್ತಾರೆ ಮತ್ತು ಅವರ್ರು ಏಕೆ ಸಹಾಯ ಮಾಡುವದಿಲ್ಲಾ ಎಂದು ಪ್ರಶ್ನಿಸುತ್ತಾರೆ. ಉತ್ಸಾಹ ಕೆಲಸ ಶಿಕ್ಷಕರು ಶಾಲಾ ಕಾರ್ಯಗಳಲ್ಲಿ ನಿರುತ್ಸಾಹವಾಗಿ ಕೆಲಸ ಮಾಡುತ್ತಾರೆ ಹಾಗೂ ಅಂತವರಲ್ಲಿ ಒಬ್ಬ ಶಿಕ್ಷಕರ ಗಮನಕ್ಕೆ ಬಂದಿದ್ದು ಏನೆಂದರೆ ಅವರ ಹೆಸರು ಮಾಗಾರ ಅವರಿಗೆ ಅಪರಿಚಿತ ಇದ್ದದ್ದು ಇವರು ಬೋಧನೆಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ಪ್ರೋತ್ಸಾಹ ಹಾಗೂ ದಿಕ್ಕು ಇರುವದಿಲ್ಲಾ ಕೆಲ ಒಬ್ಬರು ಒಳ್ಳೆಯ ಶಿಕ್ಷಕರು ಇದ್ದು ಅವರ ಬೋಧನೆಯನ್ನು ವಿದ್ಯಾರ್ಥಿಗಳು ಗೌರವಿಸುತ್ತಾರೆ. ಆದರೆ ಪಾಠಗಳು ನಿರುತ್ಸಾಹದಿಂದ ಕೂಡಿರುತ್ತದೆ ಮತ್ತು

ಪುನರಾವರ್ತನೆ ಆಗುತ್ತದೆ. ಮಾಗಾರ ಅವರದ್ದು ಕೆಳಮಟ್ಟದ ಕಾರ್ಯ ವ್ಯವಸ್ಥೆಯ ಮತ್ತು ಕೆಳಮಟ್ಟದ ಸಂಬಂಧ ವ್ಯವಸ್ಥೆ.

ವಿವಿಧ ಶೈಲಿಗಳನ್ನು ಅಭ್ಯಾಸ ಮಾಡಿದ ನಂತರ ಮತ್ತು ಶಾಲಾ ಸಂಸ್ಕೃತಿಯು ತನ್ನನ್ನು ತಾನು ಹೇಗೆ ವಿವಿಧ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವವು ಎಂದು ಅಭ್ಯಸಿಸಿದಾಗ ಶಾಲಾ ಸಂಸ್ಕೃತಿಯಲ್ಲಿ ನಮ್ಮ ಪಾತ್ರವನ್ನು ತಿಳಿದು ಕೊಳ್ಳುವುದು ಬಹಳ ಮುಖ್ಯ. ನಾವು ಏನೋ ಮಾಡುತ್ತೇವೆ ಅನ್ನುವುದರ ಜೊತೆಗೆ ಹೇಗೆ ಮಾಡುತ್ತೇವೆ ಎಂಬುದು ಬಹಳ ಮುಖ್ಯ. ವಿಶೇಷವಾಗಿ ಒಂದು ಶಾಲಾ ಸಂಸ್ಕೃತಿಯನ್ನು ಸ್ಥಾಪಿಸುವದರಲ್ಲಿ ಮುಂದಿನ ಚಟುವಟಿಕೆಯಲ್ಲಿ ನೀವು ಒಬ್ಬ ನಾಯಕರಾಗಿ ಶಾಲಾ ಸಂಸ್ಕೃತಿಯನ್ನು ಸ್ಥಾಪಿಸಲು ನೀವು ಏನು ಕ್ರಮ ಕೈಕೊಳ್ಳಬೇಕು ಮತ್ತು ಹೇಗೆ ಕೈಕೊಳ್ಳಬೇಕು ಎಂದು ತಿಳಿಸುತ್ತದೆ.

## ಚಟುವಟಿಕೆ : 3 ಶಾಲಾ ಸಂಸ್ಕೃತಿಯು ನಿರ್ಧರಿಸುವದರಲ್ಲಿ ನಾಯಕತ್ವದ ಪಾತ್ರ

ಯಾವುದಾದರೂ ಎರಡು ಸಂದರ್ಭಗಳನ್ನು ನೀವು ನೆನಪಿಸಿಕೊಳ್ಳಿ ಆ ಸಂದರ್ಭಗಳಲ್ಲಿ ನೀವು ನಾಯಕತ್ವ ವಹಿಸಿಕೊಂಡಿರುವ ಸಂದರ್ಭಗಳಾಗಿರಬೇಕು. **ಉದಾ:** ಒಬ್ಬ ಶಿಕ್ಷಕರು ಉತ್ತಮವಾಗಿ ಬೋಧಿಸಲು ನೀವು ಮಾಡಿದ ಮಾರ್ಗದರ್ಶನ, ಶಾಲಾ ನಿಯಮಗಳಲ್ಲಿ ಮತ್ತು ನೀತಿಗಳಲ್ಲಿ ಏನಾದರೂ ಬದಲಾವಣೆ ತರಲು ಪ್ರಯತ್ನಿಸಿದ್ದಾಗ ಶಾಲೆಯಲ್ಲಿ ವಿದ್ಯಾರ್ಥಿನಿಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ತೆಗೆದುಕೊಂಡು ನಿರ್ದಿಷ್ಟ ಕಾರ್ಯಗಳು ನಿಮ್ಮ ಕಲಿಕಾ ದಿನಚರಿಯಲ್ಲಿ ಈ ಕೆಳಗೆ ಕೊಟ್ಟಿರುವ ಅಂಶಗಳ ಬಗ್ಗೆ ಬರುವ ಪ್ರತಿಕ್ರಿಯೆಗಳನ್ನು ಬರೆಯಿರಿ.

- ಮೇಲೆ ಕೊಟ್ಟಿರುವ ಪ್ರತಿಯೊಂದು ಉದಾಹರಣೆ ಬಗ್ಗೆ ನಿಮ್ಮ ಕಾರ್ಯವೈಖರಿ ಬಗ್ಗೆ ವಿಚಾರಿಸಿ ನಿಮ್ಮ ಕಾರ್ಯವೈಖರಿ ಯಾವ ಗುಣಲಕ್ಷಣಗಳನ್ನು ಹೊಂದಿರುತ್ತದೆ? ಈ ಕಾರ್ಯವೈಖರಿಗಾಗಿ ಏನಾದರೂ ನಿರ್ದಿಷ್ಟ ಕಾರಣಗಳು ಇದ್ದವೇ ?
- ಪ್ರತಿಯೊಂದು ಕಾರ್ಯವೈಖರಿಯನ್ನು ಪಾಲಕರು ಸಿಬ್ಬಂದಿಯವರು ಹಾಗೂ ವಿದ್ಯಾರ್ಥಿಗಳ ದೃಷ್ಟಿಕೋನದಿಂದ ಪರಾಮರ್ಶಿಸಿರಿ. ಶಾಲಾ ಸಂಸ್ಕೃತಿಯ ಕುರಿತು ನಿಮ್ಮ ಕಾರ್ಯವೈಖರಿ ಮುಖಾಂತರ ಅವರು ಯಾವ ಸಂದೇಶವನ್ನು ಪಡೆದುಕೊಂಡರು.

**ಚರ್ಚೆ :**

ಈ ಸಂದರ್ಭಗಳಲ್ಲಿ ಬೇರೆಯವರು ಯಾವ ಲಕ್ಷಣಗಳನ್ನು ಗುರ್ತಿಸಿದರು ಎಂಬುದನ್ನು ಕಂಡು ಹಿಡಿಯುವುದು ಕಷ್ಟಕರ ಎಂದು ಎನಿಸಿರಬಹುದು **ಉದಾ:** ನೀವು ಮುಕ್ತ ಬೇಠಿಗಾಗಿ ಅವಕಾಶ ಮಾಡಿಕೊಟ್ಟವರು ಬೇರೆಯವರು ಇದನ್ನು ವಿರುದ್ಧವಾಗಿ ತಿಳಿದುಕೊಳ್ಳಬಹುದು ಇದಕ್ಕೆ ಅವರ ಹಿಂದಿನ ಅನುಭವಗಳನ್ನು ಕಾರಣವಾಗಿರಬಹುದು. ಇನ್ನೂ ಕೆಲವು ಸಂದರ್ಭಗಳಲ್ಲಿ ತಾವು ಬಯಸಿದಂತೆ ಕಾರ್ಯ ಮಾಡುವುದು ಬಹಳ ಕಷ್ಟಕರ ಆಗಿರಬಹುದು. ಕೆಲವೊಮ್ಮೆ ಕ್ಷಿಪ್ರ ಬದಲಾವಣೆ ತರಲು ಒತ್ತಾಯ ಸಿಕ್ಕು ಉದ್ದೇಶಿತ ಗುರಿಯನ್ನು ತಲುಪಲು ವಿಫಲರಾಗಿರಬಹುದು ಹಾಗೂ ಕಾರ್ಯದಲ್ಲಿ ಹೊಂದಾಣಿಕೆ ಕೊರತೆ ಕಂಡಿರಬಹುದು ನಾಯಕರಾಗಿ ಶಾಲಾ ಸಂಸ್ಕೃತಿಯನ್ನು ಸ್ಥಾಪಿಸಲು ಹೊರಟ ನೀವು ಈ ಕೆಳಕಂಡ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಬಹಳ ಉಪಯುಕ್ತ.

- ಈ ಸಮಸ್ಯೆಯನ್ನು ಬಗೆಹರಿಸಲು ಯಾವ ರೀತಿಯ ಸಂವಾದ ಮತ್ತು ಕ್ರಿಯೆಗಳನ್ನು ವಿನ್ಯಾಸಗೊಳಿಸುತ್ತಿದ್ದೇನೆ?
- ನನ್ನ ಕಾರ್ಯದಿಂದ ಹಾಗೂ ನಡುವಳಿಕೆಯಿಂದ ಬೇರೆಯವರು ಯಾವ ಸಂದೇಶವನ್ನು ಪಡೆಯಬಹುದು?
- ಈ ಸಮಸ್ಯೆಯು ನಾವು ಸ್ಥಾಪಿಸಲು ಹೊರಟ ಸಂಸ್ಕೃತಿಯಲ್ಲಿ ಎಷ್ಟು ಅವಕಾಶಗಳನ್ನು ಕೊಡಬಹುದು?

ನಾಯಕನಾಗಿ ನಿಮ್ಮ ಕಾರ್ಯ ವೈಖರಿ ಬಗ್ಗೆ ಮತ್ತೊಬ್ಬರಿಂದ ತಿಳಿದುಕೊಳ್ಳುವದು (ಅದರ ಅನಿಸಿಕೆ ಅಭಿಪ್ರಾಯ) ಬಹಳ ಉತ್ತಮ ಇದರಿಂದ ನಿಮ್ಮ ಕಾರ್ಯಕ್ಷಮತೆ ವೃದ್ಧಿ ಆಗುವುದಲ್ಲದೇ ಉತ್ತಮ ಪರಿಣಾಮಕಾರಿ ಹಾಗೂ ಪ್ರಾಮಾಣಿಕ ಅಭಿಪ್ರಾಯಗಳನ್ನು ಕೊಡಲು ನಿಮಗೆ ಸಹಕಾರಿ ಆಗುತ್ತದೆ.



**ಚಿತ್ರ 3 ಕಾರ್ಯ–ಸಂಬಂಧ ಆಧಾರಿತ ಶಾಲಾ ನಾಯಕರು**

# 3 ನಿಮ್ಮ ಶಾಲೆಯ ಸಂಸ್ಕೃತಿಯನ್ನು ಗುರುತಿಸುವುದು ಮತ್ತು ವಿಶ್ಲೇಷಿಸುವುದು

ಶಾಲೆಗಳು ಉತ್ತಮ ಹಾಗೂ ವಿನಿಮಯಾತ್ಮಕ ಸಂಸ್ಕೃತಿ ಹೊಂದಿರಬೇಕು. ನಿಮ್ಮ ಶಾಲೆಯ ಸಂಸ್ಕೃತಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಪೂರಕ ಪಾತ್ರ ವಹಿಸುತ್ತದೆಯೇ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವ ಮೊದಲು ನಿಮ್ಮ ಶಾಲೆಯ ಸಂಸ್ಕೃತಿಯನ್ನು ಶಾಲೆಗೆ ಸಂಬಂಧಿಸಿದ ಎಲ್ಲ ವ್ಯಕ್ತಿಗಳ ಸಂಬಂಧದೊಡನೆ ಜೋಡಿಸಿ ತಿಳಿದುಕೊಳ್ಳಬೇಕು ಈ ತಿಳುವಳಿಕೆಯಿಂದ ಶಾಲೆಯ ಸಂಸ್ಕೃತಿಯ ಪರಿಚಯವು ಆಗುತ್ತದೆ ಮತ್ತು ಸುಧಾರಣೆಯನ್ನು ತರುವ ವಿಷಯಗಳ ಬಗ್ಗೆಯೂ ತಿಳಿಯುತ್ತದೆ.

ಈ ಗುರುತಿಸುವಿಕೆಯ ಅನ್ವೇಶಣೆಯಲ್ಲಿ ವಿದ್ಯಾರ್ಥಿಗಳ ಸಾಧನೆಗಳು ಶಾಲಾ ಸಂಸ್ಕೃತಿಯಿಂದಲೋ ಅಥವಾ ಅದು ಇರದಿದ್ದರೂ ಅದು ಸಾಧ್ಯವಾ ? ಎಂಬ ಪ್ರಶ್ನೆಗೆ ಉತ್ತರ ಸಿಗುತ್ತದೆ. ಇದರಿಂದ ನಿಮ್ಮ ಯೋಚನೆಯ ಉತ್ತಮ ಶಾಲೆ ಹಾಗೂ ಅದರ ಕುರಿತಾಗಿ ನಿಮ್ಮ ಗುರಿ ಹಾಗೂ ಉದ್ದೇಶಗಳ ನಡುವೆ ಉತ್ತಮ ಸಂಬಂಧ ಕಲ್ಪಿಸುತ್ತದೆ ಇದರಿಂದ ನಿಮ್ಮ ಕಾರ್ಯಕ್ಷಮತೆ ಇನ್ನೂ ಹೆಚ್ಚಾಗುವುದು.

ಪ್ರಸ್ತುತ ಶಾಲಾ ಸಂಸ್ಕೃತಿಯ ಬಗ್ಗೆ ಶಾಲೆಗೆ ಸಂಬಂಧಿಸಿದ ವ್ಯಕ್ತಿಗಳ ಹಾಗೂ ನೀವು ಶಾಲಾ ಸಂಸ್ಕೃತಿಯ ಬಗ್ಗೆ ಹೇಗೆ ತಿಳಿದುಕೊಳ್ಳಬಹುದೆಂದು ಯೋಚಿಸುವುದು ಅತೀ ಮುಖ್ಯ. ಇದರಿಂದ ಶಾಲಾ ಸಂಸ್ಕೃತಿಯು ಎಲ್ಲರಿಗೆ ಹೆಚ್ಚು ಗೋಚರಿಸುವಂತೆ ಮಾಡುತ್ತದೆ. ಪ್ರತಿಯೊಂದು ಸಂದರ್ಭದಲ್ಲಿ ತಾವು ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶವೇನೆಂದರೆ ದೀರ್ಘಕಾಲಿಕ ಪ್ರಗತಿ ಹಾಗೂ ಅಭಿವೃದ್ಧಿ ವಿಶೇಷವಾಗಿ ಶಾಲಾ ಸಂಸ್ಕೃತಿಯ ಸ್ಥಾಪನೆಯಲ್ಲಿ ಶಾಲಾ ಸಂಸ್ಕೃತಿಯ ಪ್ರಭಾರ ತಿಳಿಯಲು ವರ್ಷಗಳಷ್ಟು ಕಾಲಬೇಕಾಗಬಹುದು.

ಶಲೆಯ ಸಿಬ್ಬಂದಿಯೊಂದಿಗೆ ವಿದ್ಯಾರ್ಥಿಗಳೊಂದಿಗೆ ಮುಕ್ತ ಹಾಗೂ ಪ್ರಾಮಾಣಿಕ ಮಾತುಕತೆ ಹಾಗೂ ವಿಚಾರ ವಿನಿಮಯ ಶಾಲಾ ಸಂಸ್ಕೃತಿಯನ್ನು ತಿಳಿಯುವ ಪ್ರಕ್ರಿಯೆಯಲ್ಲಿ ಅತೀ ಮುಖ್ಯ ಅಂಶ ಇದು ಒಂದು ವಿಶಿಷ್ಟವಾದ ಸಂವಾದ ದಿನನಿತ್ಯ ನಡೆಯುವಂತಹ ಸಂವಾದಕ್ಕಿಂತಲೂ ವಿಭಿನ್ನ ಶಲಾ ಸಿಬ್ಬಂದಿಯೊಂದಿಗೆ ಮುಕ್ತ ಸಂವಾದನೆ ಮೂಲಕ ಶಾಲಾ ಸಂಸ್ಕೃತಿಯನ್ನು ತಿಳಿಯುವ ವಾತಾವರಣ ನಿರ್ಮಾಣ ಮಾಡಬೇಕಾದರೆ ಈ ಕೆಳಗಿನ ಅಂಶಗಳ ಮೇಲೆ ಗಮನಹರಿಸಬೇಕು.

- **ಆಲಿಸುವ ಗುಣ :** ಸಾಕ್ಷ್ಯಗಳನ್ನು ಕಲೆ ಹಾಕುವಾಗ ಅಭಿರುಚಿಯವರಾಗಿರಬೇಕು ಮತ್ತು ಪ್ರಭಾವಿಯಾಗಿರಬೇಕು ಮೌಖಿಕ ಅಭಿವ್ಯಕ್ತಿಗಳು ಮತ್ತು ಮುಖದ ಲಕ್ಷಣಗಳು ಮತ್ತೊಬ್ಬರನ್ನು ಪ್ರಾಮಾಣಿಕ ಅಭಿವ್ಯಕ್ತಿಯಿಂದ ದೂರಮಾಡಬಹುದು.
- **ತಮಗೆ ಸತ್ಯವೆನಿಸಿದ್ದನ್ನು ಸಿಬ್ಬಂದಿಯು ನಿರ್ಭಯವಾಗಿ ಹೇಳಿಕೊಳ್ಳುವಂತಹ ವಾತಾವರಣದ ನಿರ್ಮಾಣ :** ಗುರಿಯನ್ನು ಸ್ಪಷ್ಟವಾಗಿರಿಸಿ ಶಾಲಾ ಸಂಸ್ಕೃತಿಯ ತಿಳುವಳಿಕೆ ಈ ಸಂಸ್ಕೃತಿಯು ಧನಾತ್ಮಕವಾಗಿದ್ದು ಶಾಲೆಯು ಗುರಿಮುಟ್ಟುವದಕ್ಕೆ ಪೂರಕವಾಗಿರಬೇಕು.
- **ನಿಮ್ಮ ಶಾಲೆಯ ನಡುವಳಿಕೆಗಳನ್ನು ಸಮರ್ಥಿಸಿಕೊಳ್ಳಲು ಭಾವನೆಗಳನ್ನು ನಿಗ್ರಹಿಸಿರಿ :** ಹೊಗಳಿಕೆ ಹಾಗೂ ನಿರಾಕರಣೆಗೆ ಸಂಬಂಧಿಸಿದಂತೆ ಸಾಕ್ಷ್ಯಗಳನ್ನು ಪಡೆಯಿರಿ ಮುಖ್ಯವೆನಿಸಿದ ಸಮಸ್ಯೆಗಳು ವಿಚಾರಗಳು ಕೂಡ ಸಭೆಗಳಲ್ಲಿ ತರಬೇತಿ ಕಾರ್ಯಕ್ರಮಗಳಲ್ಲಿ ಚರ್ಚಿಸಿ ಪರಿಹರಿಸಬಹುದು.

ವಿಡಿಯೋ: ಶಾಲಾ ನಾಯಕತ್ವ – ನಿಮ್ಮ ಶಾಲೆಯನ್ನು ಅರಿತುಕೊಳ್ಳುವುದು. Video: School Leadership – Knowing your school

## ಚಟುವಟಿಕೆ 4: ಪ್ರಸ್ತುತ ಶಾಲಾ ಸಂಸ್ಕೃತಿಯ ಕುರಿತು ಸಾಕ್ಷ್ಯಗಳನ್ನು ಕಲೆ ಹಾಕುವದು

ಶಾಲಾ ಅಭಿವೃದ್ಧಿಯಲ್ಲಿ ನಿಮ್ಮೊಡನೆ ಕೆಲಸ ಮಾಡಲು ಸಿದ್ಧವಿರುವ ಸಿಬ್ಬಂದಿಯನ್ನು ಗುರುತಿಸಿ ಶಾಲಾ ಸಂಸ್ಕೃತಿಯ ಬಗ್ಗೆ ತಿಳುವಳಿಕೆ ಮೂಡಿಸುವ ಮತ್ತು ಸಂಬಂಧಿಸಿದಂತೆ ಸಾಕ್ಷ್ಯಗಳನ್ನು ಕಲೆ ಹಾಕುವದು ಇದು ಈ ಕೆಳಗಿನ ಅಂಶಗಳನ್ನು ಹೊಂದಿರಬಹುದು.

- ನಿಮ್ಮೊಡನೆ ಶಾಲೆಯ ಗೇಟ ಬಳಿ ನಿಂತು ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಶಾಲೆಯೊಳಗೆ ಹೇಗೆ ಬರುತ್ತಾರೆಂದು ಗಮನಿಸುವುದು
- ಶಾಲೆಯ ಒಂದು ಸುತ್ತು ಹಾಕಿ ಶಾಲೆಯನ್ನು ಹೇಗೆ ಶೃಂಗರಿಸಿ ಇಡಲಾಗಿದೆ ಎಂದು ಪರಿಶೀಲಿಸುವುದು.
- ಶಾಲೆಯನ್ನು ಸಭೆಯನ್ನು ನಡೆಸುವುದರ ಬಗ್ಗೆ ಗಮನ
- ವಿದ್ಯಾರ್ಥಿಗಳು ವರ್ಗ ಕೋಣೆಗಳಿಗೆ ಹೋಗಿ ಹೇಗೆ ತಮ್ಮ ಆಸನಗಳ ಮೇಲೆ ಕುಳಿತುಕೊಳ್ಳುತ್ತಾರೆಂದು ತಿಳಿಯುವದು.
- ವಿದ್ಯಾರ್ಥಿ ಶಿಕ್ಷಕರು ಒಬ್ಬರನ್ನೊಬ್ಬರು ಹೇಗೆ ಮಾತನಾಡಿಸುತ್ತಾರೆಂದು ಗಮನಿಸುವುದು.
- ಶಾಲಾ ಕಾನೂನುಗಳನ್ನು ಹೇಗೆ ಅನುಷ್ಠಾನಗೊಳಿಸಿದ್ದಾರೆಂದು ಪರಾಮರ್ಶಿಸುವದು.
- ಶಾಲಾ ಪ್ರಾರಂಭದಂದು ಶಿಕ್ಷಕರು ಹೇಗೆ ಪಾಠ ಪ್ರಾರಂಭಿಸುತ್ತಾರೆಂದು ಗಮನಿಸುವುದು.
- ಶಾಲಾ ಸಿಬ್ಬಂದಿಗೆ, ವಿದ್ಯಾರ್ಥಿಗಳಿಗೆ ಹಾಗೂ ಪಾಲಕರಿಗೆ ಶಾಲಾ ಸಂಸ್ಕೃತಿಯ ಬಗ್ಗೆ ಅವರ ಅಭಿಪ್ರಾಯ ಕೇಳುವುದು.
- ಕಲೆ ಹಾಕಿದ ಸಾಕ್ಷ್ಯಗಳ ಕುರಿತು ಶಾಲಾ ಸಿಬ್ಬಂದಿಯೊಂದಿಗೆ ಚರ್ಚೆ.

ಸಾಕ್ಷ್ಯಗಳನ್ನು ಕಲೆ ಹಾಕುವುದರಲ್ಲಿ ಸ್ವಲ್ಪ ಸಮಯ ವ್ಯಯಿಸಿದಾಗ ನಿಮ್ಮ ಸಿಬ್ಬಂದಿಯೊಡನೆ ಅವುಗಳ ಬಗ್ಗೆ ಚರ್ಚಿಸಿರಿ, ಶಾಲಾ ಸಂಸ್ಕೃತಿಗೆ ಸಂಬಂಧಿಸಿದಂತೆ ಅವರು ಹಾಗೂ ನೀವು ಕಂಡು ಕೊಂಡಂತಹ ಅಂಶಗಳ ಬಗ್ಗೆ ಚರ್ಚಿಸಿರಿ ಮತ್ತು ವಿದ್ಯಾರ್ಥಿಯ ಕಲಿಕೆಯ ಮೇಲೆ ಅವುಗಳ ಪರಿಣಾಮವನ್ನು ಚರ್ಚಿಸಿ ನಿಮ್ಮ ಚರ್ಚೆ ಹಾಗೂ ಸಂವಾದ ಈ ಹಿಂದ ಉಲ್ಲೇಖಿಸಿದಂತೆ ಅ ಇ ಕ 2010 ರ ಅನುಗುಣವಾಗಿರಬೇಕು.

- ಸಾಮಾಜಿಕ ಪರಿಸರ.
- ಭೌದ್ಧಿಕ ಪರಿಸರ.

- ನಿಯಮ ಮತ್ತು ನಿಬಂಧನೆಗಳು.
- ಸಂಪ್ರದಾಯಗಳು ಮತ್ತು ವಾಡಿಕೆಗಳು /ದಿನಚರಿಗಳು
- ಸಿಬ್ಬಂದಿಗಳು ಮತ್ತು ಶಿಕ್ಷಕರಿಗೆ ಬೆಂಬಲ ನೀಡುವುದು/ ಧ್ವನಿಗೂಡಿಸುವುದು.
- ಪೋಷಕರೊಂದಿಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಮಾರ್ಗಗಳು.
- ಸಂಬಂಧಗಳು ಮತ್ತು ವರ್ತನೆಗೆ ಸಂಬಂಧಿಸಿದ ನಿಯಮಗಳು/ರೂಢಿಗಳು

ಈ ಪ್ರಕ್ರಿಯೆ ನಿಮ್ಮ ವಿಚಾರಗಳನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ಬರೆಯಿರಿ, ಸಾಕ್ಷ್ಯಗಳನ್ನು ಕಲೆ ಹಾಕುವುದರ ಮುಖ್ಯ ಉದ್ದೇಶ ನಿಮ್ಮ ಶಾಲೆಯ ಒಟ್ಟಾರೆ ವಸ್ತು ಸ್ಥಿತಿಯನ್ನು ತಿಳಿಯುವದು ಆ ತಿಳುವಳಿಕೆಯಿಂದ ಶಾಲೆಯಲ್ಲಿ ಕಲಿಕೆಯ ಮೌಲ್ಯಯುಕ್ತ ವಾತಾವರಣ ನಿರ್ಮಾಣ ಮಾಡುವುದು ಇನ್ನುಳಿದವರನ್ನು ಮಾಹಿತಿ ಸಂಗ್ರಹಣೆಯಲ್ಲಿ ಸೇರಿಸಿಕೊಳ್ಳುವುದರ ಮುಖ್ಯ ಉದ್ದೇಶ ಶಾಲೆಯ ಸಂಸ್ಕೃತಿ ಬಗ್ಗೆ ಅವರ ವಿಚಾರಗಳನ್ನು ತಿಳಿಯುವುದು ಮತ್ತು ಉತ್ತಮ ಶಾಲಾ ಸಂಸ್ಕೃತಿಯ ಸ್ಥಾಪನೆಯಲ್ಲಿ ಜವಾಬ್ದಾರಿಯುತ ಪಾತ್ರ ನಿರ್ವಹಿಸುವ ಶಿಕ್ಷಕರನ್ನಾಗಿ ಮಾಡುವುದು. ಶಾಲಾ ಸಂಸ್ಕೃತಿಯ ಸ್ಥಾಪನೆಗೆ ಉತ್ತಮವಾದ ವೇದಿಕೆ ನಿರ್ಮಾಣ ಮಾಡುವುದು. ಅತೀ ಉತ್ತಮ ಇದಕ್ಕಾಗಿ ಒಂದು ಯೋಜನೆ ರೂಪಿಸಿ ಅದನ್ನು ಅನುಷ್ಠಾನಗೊಳಿಸುವುದು ಅತೀ ಮುಖ್ಯ. ನಿಮ್ಮೊಡನೆ ಇಷ್ಟು ಹೊತ್ತು ಕೆಲಸ ಮಾಡಿದ ಶಿಕ್ಷಕರು ನಿಮ್ಮ ನಿಷ್ಠೆಯನ್ನು ಸರಿಯಾಗಿ ತಿಳಿದು ಮುಂದಿನ ರೂಪರೇಷಗಳನ್ನು ಹಾಕುವುದರಲ್ಲಿ ಹೆಚ್ಚು ಉತ್ಸಾಹದಲ್ಲಿ ನಿಮ್ಮೊಡನೆ ಕೆಲಸ ಮಾಡುತ್ತಾರೆ.

## ಚಟುವಟಿಕೆ 5: ಸಮೂಹದ ಜೊತೆ ಕೆಲಸವನ್ನು ಗುರುತಿಸಿ ಸಮೂಹವನ್ನು ಸುಧಾರಣೆ

ಒಂದು ಸಲ ಎಲ್ಲ ಶಿಕ್ಷಕರು ಶಾಲೆಯ ಸಂಸ್ಕೃತಿಯ ಮಾಹಿತಿಯನ್ನು ಸಂಗ್ರಹಿಸಿ ಮತ್ತು ಅವರ ವೈಯಕ್ತಿಕವಾದ ವಿಚಾರ ದಾರೆಗಳನ್ನು ಸಂಗ್ರಹಿಸಿ ಕಾರ್ಯಾಗಾರದಲ್ಲಿ ಒಂದು ಕೋಣೆಯಲ್ಲಿ ಇಡುವುದು ಒಂದು ವೇಳೆ ಶಿಕ್ಷಕರು ಇದನ್ನು ನಿರ್ವಹಿಸುವಲ್ಲಿ ಆಸಕ್ತಿಯುಳ್ಳವರಾಗಿದ್ದರೆ ಶಾಲಾ ಅವಧಿ ನಂತರ ಕೈಗೊಳ್ಳಬಹುದು.

ಕಾರ್ಯಾಗಾರ ಮಾಡುವುದಕ್ಕಿಂತ ಮುಂಚೆ ಆ ಕೆಲಸದಲ್ಲಿ ಬರುವ ಕೆಲವೊಂದು ಮಾಹಿತಿಗಳನ್ನು ಸಂಗ್ರಹಿಸಲು ಶಿಕ್ಷಕರ ಕೈಯಲ್ಲಿ ಪೇಪರ ಇರಬೇಕು. ತಂಡದ ಕಾರ್ಯವನ್ನು ಗುರುತಿಸಿ ಅವುಗಳ ಕಾರ್ಯವೈಖರಿಯನ್ನು ಶಾಲಾ ಅವಧಿಯಲ್ಲಿ ಗುರುತಿಸುವಿರಿ. ಸ್ಟೋಲ್ ಮತ್ತು ಫ್ಲಿಂಕ್ ಇವರ ಸಂಶೋಧನೆಗಳನ್ನಾಧರಿಸಿದ ಈ ಕೆಳಗಿನ ಸಂಗತಿಗಳನ್ನು ಪ್ರಾಯೋಗಿಕವಾಗಿ ಈ ರೀತಿಯಾಗಿ ಗುರುತಿಸಬಹುದು.

- ನಾವೆಲ್ಲರೂ ನಮ್ಮ ದೃಷ್ಟಿ ಮತ್ತು ಗುರಿಗಳ ಗಮನ
- ನಮ್ಮ ಸೋಲು ಗೆಲವಿಗೆ ನಾವು ಹೊಣೆಗಾರರು
- ತಂಡದ ಕಾರ್ಯ
- ನಾವು ಮಾಡಬೇಕಾದ್ದು ನಾವು ಉತ್ತಮವಾಗಿ ಪಡೆದಿದ್ದೇವೆ
- ನಾವು ಕಲಿಯುತ್ತಿದ್ದೇವೆ ಮತ್ತು ಕಲಿಸುತ್ತಿದ್ದೇವೆ
- ಹೊಸದಾರಿಗೆ ಪ್ರಯತ್ನಿಸುತ್ತದೆ
- ನಮ್ಮ ತೊಂದರೆಗೆ ಸಹಾಯವಿದೆ
- ನಾವು ಮಹತ್ವವಾದವರು
- ನಾವು ಪ್ರತಿಯೊಬ್ಬರ ವೈಯಕ್ತಿಕವಾದ ವ್ಯತ್ಯಾಸ ಗುರುತಿಸಿತು
- ನಾವೆಲ್ಲರೂ ನಮ್ಮ ಸೇವೆಯನ್ನು ಆನಂದಿಸುತ್ತೇವೆ.

ಶಿಕ್ಷಕರಿಗೆ ಎರಡು ಪಂಗಡ ಮಾಡಿ ಪೇಪರಗಳನ್ನು ಕೊಟ್ಟು ಪ್ರಸ್ತುತ ಶಾಲೆಯ ಸ್ಥಿತಿಗತಿ ಮತ್ತು ಸಾಧನೆಗಳ ಬಗ್ಗೆ ವಿವರಿಸಿರಿ ಪ್ರತಿಯೊಬ್ಬರೂ ತಮ್ಮ ತಂಡದ ಕಾರ್ಯದಲ್ಲಿ ತಲ್ಲೀನರಾಗಬೇಕು ಶಿಕ್ಷಕರು ತಯಾರಿಸಿದ ಫಲಿತಾಂಶವನ್ನು ಪೇಪರ ಮೂಲಕ ಸೂಚನಾ ಫಲಕದಲ್ಲಿ ಅಂಟಿಸುವುದು.

ಈ ಚಟುವಟಿಕೆಯನ್ನು ಪೂರ್ಣಗೊಳಿಸಿದ ನಂತರ ಇದು ನಿಮ್ಮನ್ನು ತಂಡಕ್ಕೆ ಶಾಲೆಯ ಪ್ರಸ್ತುತ ಸಂಸ್ಕೃತಿಯ ಬಗ್ಗೆ ಇರುವ ಅರ್ಥಗ್ರಹಿಕೆ ಮತ್ತು ಎಲ್ಲಿ ಅಸಮ್ಮತಿ ಮತ್ತು ಭಿನ್ನಾಭಿಪ್ರಾಯಗಳಿವೆ ಎಂಬುದನ್ನು ಗುರುತಿಸಲು ಶಕ್ತರನ್ನಾಗಿಸುತ್ತದೆ. ನೀವು ಗಮನಿಸಿರಬಹುದು ಮೇಲೆ ನೀಡಲಾಗಿರುವ ಕೆಲವು ಹೇಳಿಕೆಗಳು ಶಾಲೆಯ ಕೆಲವು ಅಂಶಕ್ಕೆ ಮಾತ್ರ ಅನ್ವಯವಾಗುತ್ತದೆಯೇ ಹೊರತು ಎಲ್ಲದಕ್ಕೂ ಅನ್ವಯವಾಗುವುದಿಲ್ಲ, ಅಥವಾ ಕೆಲವು ಹೇಳಿಕೆಗಳು ನಿರ್ದಿಷ್ಟವಾಗಿ "Getting there "ಕ್ಷೇತ್ರಕ್ಕೆ ಸಂಬಂಧಿಸಿದೆ. ಈ ಮಾಹಿತಿಯು ಮಹತ್ವದ್ದಾಗಿದ್ದು ನೀವು ಗಮನಹರಿಸಬೇಕಾದ ಅಂಶಗಳನ್ನು ಆದ್ಯತೀಕರಿಸಲು ಪ್ರಾಥಮಿಕ ಹಂತವಾಗುವುದು ಹಾಗಿದ್ದಾಗ್ಯೂ, ತಂಡದ ಅಭಿಪ್ರಾಯವು ವಿಶಾಲವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆಯೇ ಎಂಬುದು ಬಹಳ ಮುಖ್ಯವಾದುದು.



**ಚಿತ್ರ 4 ಉತ್ತಮಪಡಿಸಬೇಕಾದ ಅಂಶಗಳನ್ನು ಗುರುತಿಸಲು ತಂಡದೊಂದಿಗೆ ಕಾರ್ಯವನ್ನು ನಿರ್ವಹಿಸುವುದು**

ಶಾಲೆಗಳು ಹಿಮ್ಮಾಹಿತಿ ನೀಡಬಲ್ಲ ಪರಿಸರವನ್ನು ನಿರ್ಮಾಣ ಮಾಡುವಲ್ಲಿನ ಸಾಧನೆಯೆಡೆಗಿನ ಚಲನೆಯನ್ನು ಮೌಲ್ಯಮಾಪನ ಮಾಡಲು ಬಯಸಬಹುದು. ನಿಮ್ಮ ಶಾಲೆಯಲ್ಲಿ ಶಿಕ್ಷಕರು ತಮ್ಮ ಬೋಧನೆಯನ್ನು ಉತ್ತಮಪಡಿಸಿಕೊಳ್ಳಲು ಒಂದು ಉತ್ತಮ ಸ್ಥಳ ಎಂದು ನಿಮಗನ್ನಿಸಿದರೆ, ಉಳಿದ ಶಿಕ್ಷಕರು ಸಹ ಇದೇ ರೀತಿಯ ಅಭಿಪ್ರಾಯವನ್ನು ಹೊಂದಿದ್ದಾರೆಯೇ ಎಂಬುದನ್ನು ತಿಳಿಯಲು ಇದು ಸುಸಮಯ. ಇದರೊಂದಿಗೆ ನಿಮ್ಮ ವಿದ್ಯಾರ್ಥಿಗಳೂ ಸಹ ಇಲ್ಲಿ ಅವರು ತಿಳಿಯಬೇಕಾದ ಅಂಶಗಳನ್ನು ಕಲಿಯುವ, ಮತ್ತು ಆತ್ಮವಿಶ್ವಾಸವನ್ನು ಬೆಳೆಸುವ ರೀತಿಯಲ್ಲಿರುವುದರಿಂದ ತರಗತಿಯಲ್ಲಿ ಭಾಗವಹಿಸಲು ಇಷ್ಟಪಡುತ್ತಾರೆಯೇ ಎಂಬುದನ್ನು ಮತ್ತು ಪೋಷಕರು ತಮ್ಮ ಮಕ್ಕಳು ಕಲಿಯುತ್ತಿರುವ ರೀತಿಯನ್ನು ಒಪ್ಪುತ್ತಾರೆಯೇ ಎಂಬುದನ್ನು ನೀವು ಅನ್ವೇಷಿಸಬೇಕಾದುದು ಮಹತ್ವದ್ದಾಗಿದೆ.

ಈ ಮುಂದಿನ ಚಟುವಟಿಕೆಯು ವಿವಿಧ ಭಾಗೀದಾರರ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳಲು ನಿಮಗೆ ಸಹಕಾರಿಯಾಗುವುದು.

## ಚಟುವಟಿಕೆ 6: ಮಧ್ಯಸ್ಥಗಾರರ ಜೊತೆ ತೊಡಗಿಸಿಕೊಳ್ಳುವಿಕೆ

ತಂಡದ ಸದಸ್ಯರ ಯೋಜನೆಗಳನ್ನು ಪರಿಶೀಲಿಸಿ ಮಧ್ಯಸ್ಥಗಾರರೊಂದಿಗೆ ಸಂದರ್ಶನ ಮೂಲಕ ಶಾಲೆಯ ಸಂಸ್ಕೃತಿಯನ್ನು ಹೇಗೆ ಸುಧಾರಿಸಬಹುದು ಇದರಲ್ಲಿ ಶಾಲೆಯ ಮಕ್ಕಳು, ಪಾಲಕರು, ವ್ಯಾಪಾರಸ್ಥರು, ಧಾರ್ಮಿಕ ಮುಖ್ಯಸ್ಥರು ಇನ್ನೀತರ ಪಾತ್ರ ಪ್ರಮುಖವಾದುದು.
ಶಿಕ್ಷಣದ ಹಕ್ಕು ಕಾಯ್ದೆ 2009 ರ ಪ್ರಕಾರ ಶಾಲಾ ಆಡಳಿತ ಮಂಡಳದವರು ಈ ಕೆಳಗಿನಂತೆ ಕಾರ್ಯರೂಪಕ್ಕೆ ತರಬೇಕು

- ಶಾಲೆಯ ಶಿಸ್ತಿನ ಬಗ್ಗೆ ಗಮನಹರಿಸಬೇಕು
- ಶಾಲೆಯ ಸುಧಾರಣೆಯ ಬಗ್ಗೆ ಯೋಜನೆ ಹಾಕುವದು.
- ಸರಕಾರ ನೀಡಿರುವ ಸೌಲಭ್ಯವನ್ನು ಸರಿಯಾಗಿ ಬಳಸಿಕೊಳ್ಳಬೇಕು.

ಮೇಲಿನವುಗಳ ಅಂಶಗಳನ್ನಾಧರಿಸಿ ಕೆಲವೊಂದು ಪ್ರಶ್ನೆಗಳನ್ನು ವಿಂಗಡಿಸಬಹುದು ಕಾರ್ಯಾಗಾರದಲ್ಲಿ ನಮ್ಮ ವಿಚಾರಗಳನ್ನು ವ್ಯಕ್ತಪಡಿಸುವುದು ಹಾಗೂ ಸುಧಾರಣೆಗಾಗಿ ಕೆಲವೊಂದು ಪ್ರಶ್ನೆಗಳನ್ನು ಮಧ್ಯಸ್ಥಗಾರರಿಗೆ ಕೇಳುವುದು ಯಾರು ಈ ಚಟುವಟಿಕೆಯಲ್ಲಿ ದಿನಾಲು ಭಾಗವಹಿಸುವುದಿಲ್ಲಾ ಅಂತವರಿಗೆ ಪ್ರಸ್ತುತದಲ್ಲಿರುವ ಸಂಸ್ಕೃತಿ ಬಗ್ಗೆ ಮಾಹಿತಿಯನ್ನು ಒದಗಿಸುವುದು.

- **ಶಾಲೆಯ ದಿನ ನಿತ್ಯದ ಕಾರ್ಯ ನಿರ್ವಹಣೆ ಮತ್ತು ಅವುಗಳು ಯಾವ ರೀತಿ:** ಶಾಲಾ ಸಮಯವನ್ನು ಶಾಲೆಯ ಹಿತದೃಷ್ಟಿಯಿಂದ ಇಟ್ಟುಕೊಳ್ಳುವದು ಪರಿಪೂರ್ಣ ಸಮಯ ಪಟ್ಟಿಯನ್ನು ಹೇಗೆ ಗುರುತಿಸಿಕೊಳ್ಳುವದು ಯಾವ ಚಟುವಟಿಕೆಗೆ ಮಹತ್ವ ಕೊಟ್ಟಿದ್ದು ಹಾಗೂ ಯಾವುದಾದರೊಂದು ಚಟುವಟಿಕೆಯನ್ನು ಮಧ್ಯಂತರ ಬಿಡುವಿನಲ್ಲಿ ಅಳವಡಿಸಿದ್ದು ಆ ಅವಧಿಯಲ್ಲಿ ಏನು ಮಾಡಬಹುದು ವಿದ್ಯಾರ್ಥಿಗಳ ಬೇಡಿಕೆ ಇಚ್ಛೆಯನ್ನು ಯಾರು ಎದುರಿಗೆ ವ್ಯಕ್ತಪಡಿಸಬಹುದು ಆ ಕಾರ್ಯಕ್ಕೆ ಯಾರನ್ನು ನೇಮಿಸಬೇಕು ಶಿಕ್ಷಕರಿಗೆ ಯಾರಿಗೆ ನೇಮಿಸಬೇಕೆಂದು ವಿಚಾರವಿದೆಯೋ ಒಂದು ವೇಳೆ ಅವರಿಗೆ ಮಾಹಿತಿ ಬೇಕಾದಲ್ಲಿ ಯಾರನ್ನು ನೇಮಿಸಬೇಕು ಆ ಕಾರ್ಯಕ್ಕೆ.

- **ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಯಾವ ಗುಣಗಳನ್ನು ಗಮನವಿರಿಸುವರು :**
- ಯಾರನ್ನು ಸ್ವತ್ತುಗಳನ್ನಾಗಿಸಬೇಕು ಶಾಲೆಗೆ ?
- ಮೇಲಿಂದ ಮೇಲಿಂದ ಯಾವ ಗುಣಗಳನ್ನು ಪರೀಕ್ಷಿಸಬೇಕು
- ವಿದ್ಯಾರ್ಥಿಗಳು ಏನನ್ನು ಮಾಡಲು ಅನುಮತಿಸಬೇಕು
- ವಿದ್ಯಾರ್ಥಿಗಳು ಯಾವುದನ್ನು ಮಾಡಲು ಅನುಮತಿಯಿಲ್ಲ
- ಯಾವ ಕಾರ್ಯಗಳಿಗೆ ಅನುಮತಿ ಇದೆ ?

- ಮಧ್ಯಸ್ಥಾಗಾರರ ಜೀವನ ಮತ್ತು ಪ್ರತಿಯೊಬ್ಬ ಮಧ್ಯಸ್ಥಗಾರರ ತೊಡಗಿಸುವಿಕೆ.

- **ಪ್ರತಿಯೊಬ್ಬ ಭಾಗೀದಾರರು ಶಾಲೆಯಲ್ಲಿ ಕಳೆಯ ಬಯಸುವ ವಿಶಿಷ್ಟ ದಿನದ ಪರಿಕಲ್ಪನೆಯ ವಿನ್ಯಾಸ :**
  ಶಾಲೆಯ ಒಟ್ಟಾರೆ ಸನ್ನಿವೇಶದಲ್ಲಿ ಪ್ರತಿಯೋರ್ವ ಭಾಗೀದಾರರ ಪರಿಕಲ್ಪನೆಯಲ್ಲಿ ಮತ್ತು ದೃಷ್ಠಿಯಲ್ಲಿ
  - ಶಾಲಾ ಶಿಸ್ತು,
  - ಪರಸ್ಪರ ಸಹಕಾರ ಮತ್ತು ಪ್ರೋತ್ಸಾಹ
  - ಸಂಭ್ರಮಾಚರಣೆಯ ವಿಧಿ ವಿಧಾನ
  - ವಿದ್ಯಾರ್ಥಿಗಳು ಶ್ರಮಪಡುವಿಕೆ
  - ವಿದ್ಯಾರ್ಥಿಗಳ ಸಾಧನೆ ಮತ್ತು ಸಮಗ್ರ ಪರಾಕ್ರಮಗಳ ಕುರಿತು

  ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಮುದಾಯದ ಭಾಗೀದಾರರು ನಿರಂತರವಾಗಿ ಮತ್ತು ಕಾಲಕ್ಕೆ ತಕ್ಕಂತೆ ಆದ್ಯತೆಗಳನುಸಾರ ಚಿಂತನೆ ಮಾಡುವ ನಿಟ್ಟಿನಲ್ಲಿ ಸೂಕ್ತ ವಾತಾವರಣ ನಿರ್ಮಾಣ ಮಾಡುವುದು.

- **ಸಾಧಿತ ಮತ್ತು ಸಾಧನೆಗಾಗಿ ಉದ್ದೇಶಿತ ವಿಷಯಗಳ ಕುರಿತು ಆಶಾಭಾವ :**
  - ಶಾಲೆಯ ಯಾವ ಸಂಗತಿ ಕುರಿತಾಗಿ ತಾವು ಯಾವಾಗಲೂ ಅಭಿಮಾನ ಪಡುತ್ತೀರಿ?
  - ಯಾವ ಸಂಗತಿಯನ್ನು ಸಾಧಿಸಿದರೆ ತಾವು ತಮ್ಮ ಶಾಲೆಯ ಕುರಿತಾಗಿ ಇನ್ನೂ ಅಧಿಕವಾಗಿ ಅಭಿಮಾನ ಪಡುವಿರಿ,
  - ತಮ್ಮ ಶಾಲೆಯಲ್ಲಿ ಅಮೂಲಾಗ್ರವಾಗಿ ಬದಲಾಗಬೇಕೆಂದು ಬಯಸುವ ವಿಷಯು
  - ತನ್ನ ಹಿಂದಿನ ಉತ್ತಮ ಅನುಭವ ಮತ್ತು ಪ್ರಯೋಗಗಳಿಂದ ತಮ್ಮ ಶಾಲೆಯು ಸಾಧಿಸಿದ ನಿಚ್ಚಳ ಬದಲಾವಣೆ ಹಾಗೂ ಅದು ಸತ್ಯಾಪಣೆಗೆ ಅರ್ಹವಾಗಿದೆಯೆ?
  - ಹೊಸ ಹಾಗೂ ನಾವೀನ್ಯಯುತವಾದ ಚರಿತ್ರಾರ್ಹವಾದ ಅಂಶಗಳೇನಾದರೂ ಇವೆಯೇ?
  - ಶಾಲೆಯಲ್ಲಿ ನಡೆಯುವ ಕಲಿಕಾ–ಬೋಧನಾ ಪ್ರಕ್ರಿಯೆಯು ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಲು ಶಕ್ತವಾಗಿದೆಯೇ?
  - ವಿದ್ಯಾರ್ಥಿಗಳು ಅವರ ಸ್ವ ಸಾಮರ್ಥ್ಯಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಗಳಿಸಲು ಬೋಧನಾ ಪದ್ಧತಿಯಲ್ಲಿ ಯಾವ ಬದಲಾವಣೆಗಳನ್ನು ನೀವು ಅಪೇಕ್ಷಿಸುತ್ತೀರಿ.

- **ಸವಾಲುಗಳನ್ನು ಹೇಗೆ ಎದುರಿಸುವುದು ಮತ್ತು ನಿಭಾಯಿಸುವುದು :**
  - ಶಾಲೆಯು ಯಾವ ಯಾವ ವಿಷಯಗಳಲ್ಲಿ ಸರಿಯಾಗಿ ಸಾಗುತ್ತಿದೆ ಮತ್ತು ಯಾವ ವಿಷಯಗಳಲ್ಲಿ ಸಾಧಾರಣ ಪ್ರಮಾಣದಲ್ಲಿದೆ
  - ಸಾಧನೆಗೆ ಪೂರಕವಾದ ವೈವಿಧ್ಯಮಯ ಪರಿಹಾರಗಳ ಸಾಧ್ಯತೆ,
  - ಪರಿಹಾರಾತ್ಮಕ ಚಟುವಟಿಕೆಗಳನ್ನು ಯಾರು ನಿಭಾಯಿಸುತ್ತಿದ್ದಾರೆ ಮತ್ತು ಹೇಗೆ
  - ಅನಪೇಕ್ಷಿತ ಸನ್ನಿವೇಶಗಳು ಉಂಟಾದಾಗ ಶಾಲೆಗಳು ಯಾವ ರೀತಿ ನಡೆದುಕೊಳಳುತ್ತದೆ
  - ಶಾಲೆಯು ವಿಶಿಷ್ಟವಾಗಿ ಬೇರೆ ಏನನ್ನಾದರೂ ಸಾಧಿಸಬಯಸುತ್ತದೆ
  - ಶಾಲೆಯ ಅಸ್ತಿತ್ವ ಅವಧಿಯಲ್ಲಿ ಎದುರಿಸಿದ ಸಮಸ್ಯೆಗಳೇನಾದರೂ ಇದ್ದರೆ,
  - ಶಾಲೆಯ ಅಸ್ತಿತ್ವ ಅವಧಿಯಲ್ಲಿ ಎದುರಿಸಿದ ಸಮಸ್ಯೆಗಳೇನಾದರೂ ಇದ್ದರೆ ಹಾಗೂ ಅವುಗಳ ನಿವಾರಣೆಯಲ್ಲಿ ಎಸ್.ಎಮ್.ಸಿ ಯ ಪಾತ್ರ
  - ಸಮಸ್ಯೆಗಳನ್ನು ನಿರ್ವಹಿಸುವಲ್ಲಿ ಯಾವ ವಿಧದ ತಂತ್ರಗಳನ್ನು ಅಳವಡಿಸಿಕೊಳ್ಳಲಾಯಿತು ಮತ್ತು ಅವುಗಳ ಸುಸಂಗತೆತೆಯ ಪ್ರಮಾಣ ಮತ್ತು ಭವಿಷ್ಯಾವರ್ತಿ ನಿರೀಕ್ಷೆಗಳ ಕುರಿತು ಚರ್ಚಿಸುವುದು.
- **ಸವಾಲುಗಳಿಗೆ ಸ್ಪಂದನೆ ಮತ್ತು ಸ್ಪಂದನೆ ಹೇಗಿರಬೇಕು?**

ಯಾವುದು ಸರಿಯಾಗಿ ನಡೆಯುತ್ತಿದೆ ಮತ್ತು ಯಾವುದು ಉತ್ತಮವಾಗಿಲ್ಲ ಎಂಬುದನ್ನು ತಿಳಿಯಲು ಶಾಲೆಯು ಅನುಸರಿಸುವ ಪ್ರಕ್ರಿಯೆ ಯಾವುದು? ಅನುಸರಿಸಬಹುದಾದ ಯಾವುದಾದರೂ ವಿಭಿನ್ನವಾದಂತಹ ಪ್ರಕ್ರಿಯೆಯಿದೆಯೇನು? ಈ ಪ್ರಕ್ರಿಯೆಯ ಜವಾಬ್ದಾರಿ ಯಾರದ್ದು ಮತ್ತು ಯಾರು ಇದರಲ್ಲಿ ಭಾಗವಹಿಸುತ್ತಾರೆ?ಯಾವುದಾದರೂ ಅಹಿತಕರ ಘಟನೆ ಸಂಭವಿಸಿದಾಗ ಶಾಲೆ ಅದರ ಬಗ್ಗೆ ಏನು ಮಾಡುತ್ತದೆ? ಶಾಲೆ ವಿಭಿನ್ನವಾದುದನ್ನು ಮಾಡಬೇಕೇ? ಶಾಲೆಯ ತನ್ನ ಅಸ್ಥಿತ್ವದಲ್ಲಿ ಯಾವ ಬಗೆಯ ಸಮಸ್ಯೆ/ಸವಾಲುಗಳ ಸಂಪರ್ಕಕ್ಕೆ ಬಂದಿದೆ? ಇದಕ್ಕೆ ಎಸ್.ಎಂ.ಸಿಯವರ ಸ್ಪಂದನೆ ಏನು? /ಅವರೇನು ಮಾಡಿದರು? ಸಮಸ್ಯೆಯನ್ನು ಬಗೆಹರಿಸುವ ಯಾವುದಾದರೂ ನಿರ್ದಿಷ್ಟ ವಿಧಾನ/ವಿನ್ಯಾಸವಿದೆಯೇ? ಅದನ್ನು ಅನ್ವಯಿಸಲಾಗಿದೆಯೇ?ಈಗ ಆಗಿರುವ ಬದಲಾವಣೆಗಳೇನು?ಇದಕ್ಕಿಂತ ಉತ್ತಮವಾದ ಸಮಸ್ಯೆ ಬಗೆಹರಿಸುವ ವಿಧಾನವಿದೆಯೇ?

ಈ ಸಂಭಾಷಣೆಯಿಂದ ಉದ್ಭವಿಸಿದ ಶಾಲಾ ಸಂಸ್ಕೃತಿಗೆ ಸಂಬಂಧಿಸಿದ ಅಂಶಗಳು ವಿದ್ಯಾರ್ಥಿಯ ಪ್ರಗತಿ ಮತ್ತು ಸಾಧನೆಗೆ ಪೂರಕವಾಗಿದೆಯೇ ಅಥವಾ ತಡೆಗಟ್ಟುತ್ತಿದೆಯೇ ಎಂಬುದನ್ನು ಗುರುತಿಸುವ ಮೂಲಕ ಮೇಲಿನ ಎಲ್ಲಾ ಉತ್ತರಗಳನ್ನು ಕ್ರೋಡೀಕರಿಸಿರಿ.

ಸಂಬದ್ಧತೆಯಿಂದ ಕೂಡಿದ ಸಂಸ್ಥೆಗಳಲ್ಲಿ ಎಲ್ಲಾ ಭಾಗೀದಾರರು ಸಂಸ್ಕೃತಿಯನ್ನು ಒಂದೇ ದೃಷ್ಟಿಕೋನದಿಂದ ನೋಡುವರು ಮತ್ತು ಸಂಸ್ಥೆಯ ಗುರಿಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವರು. ಶಾಲೆಯನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ ನಿರ್ದೇಶನಗಳಿಗೆ ಸಂಬಂಧಿಸಿದಂತೆ ನಿಮ್ಮ ಎಸ್.ಎಂ.ಸಿ ಯವರು ಎಷ್ಟು ದೂರದಲ್ಲಿದ್ದಾರೆ? ನಿಮ್ಮ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರ ಮಾತುಗಳನ್ನು ಆಲಿಸುವಾಗ ನಿಮಗೆ ಈ ಅನುಭವವಾಗಿದೆಯೇ? ಇವರ ಪ್ರತಿಕ್ರಿಯೆಯ ಮೂಲಕ ಶಾಲೆಯ ಯಾವ ಸಂಸ್ಕೃತಿ ಎಲ್ಲರಿಗೂ ಸಮ್ಮತವಾಗಿದೆ ಎಂಬುದನ್ನು ತಿಳಿಯಬಹುದು. ಯಾವುದನ್ನು ಭಾಗೀದಾರರು ವಿಭಿನ್ನವಾಗಿ ನೋಡುತ್ತಿದ್ದಾರೆ ಮತ್ತು ಏಕೆ ಎಂಬುದನ್ನೂ ಸಹ ತಿಳಿಯಬಹುದು. ವಿಭಿನ್ನ ಅಭಿಪ್ರಾಯವಿರುವ ಕ್ಷೇತ್ರಗಳೇ ನೀವು ಸುಧಾರಿಸಬೇಕಾದ ಅಂಶಗಳಾಗಿರುವುದು.



ವಿಡಿಯೋ: ಶಾಲಾ ನಾಯಕತ್ವ –ಕಲಿಕಾ ವಾತಾವರಣ

ಮುಂದಿನ ವಿಭಾಗದಲ್ಲಿ ಪ್ರಜ್ಞಾವಂತ ರೀತಿಯಲ್ಲಿ ಗುರಿ ತಲುಪಲು ಶಾಲೆಯನ್ನು ಕೊಂಡೊಯ್ಯುವಂತಹ ಹಂಚಿತ ಧನಾತ್ಮಕ ಸಂಸ್ಕೃತಿಯನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದನ್ನು ಚರ್ಚಿಸಲಾಗುವುದು.

# 4 ಹಂಚಿತ ಧನಾತ್ಮಕ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವುದು.

ನಿಮ್ಮ ಶಾಲೆಯ ಸಂಸ್ಕೃತಿಗೆ ಪ್ರಾಧಾನ್ಯತೆ ನೀಡಲು ಆಗುವಂತಹ ಹೆಚ್ಚಿನ ಸಾಕ್ಷ್ಯಾಧಾರಗಳನ್ನು ಈಗಾಗಲೇ ನೀವು ಸಂಗ್ರಹಿಸಿಟ್ಟುಕೊಂಡಿರುವಿರಿ. ಇದು ಶಾಲಾ ಸಂಸ್ಕೃತಿಯ ಗುಣ ಲಕ್ಷಣಗಳ ಬಗ್ಗೆ (ಚಟುವಟಿಕೆ 1–3), ಶಾಲೆಯ ಸುತ್ತಲಿನ ವರ್ತನೆ ಮತ್ತು ಕ್ರಿಯೆಗಳನ್ನು ಅವಲೋಕಿಸುವುದು (ಚಟುವಟಿಕೆ–4), ನೀವು ಕಾರ್ಯನಿರ್ವಹಿಸುತ್ತಿರುವ ತಂಡದ ದೃಷ್ಟಿಕೋನಗಳ ಬಗ್ಗೆ (ಚಟುವಟಿಕೆ 5) ಮತ್ತು ಇತರ ಭಾಗೀದಾರರ ಅಭಿಪ್ರಾಯಗಳ ಬಗೆಗಿನ ನಿಮ್ಮ ಆಲೋಚನೆಗಳನ್ನೂ ಸಹ ಒಳಗೊಂಡಿದೆ.



**ಚಿತ್ರ 5 ಒಂದು ಧನಾತ್ಮಕ ಶಾಲಾ ಸಂಸ್ಕೃತಿಗೆ ಕ್ರಿಯಾ ಯೋಜನೆಯ ಅಗತ್ಯವಿದೆ.**

ಈ ಸಾಕ್ಷ್ಯಾಧಾರಗಳನ್ನು ಪರಿಣಾಮಕಾರಿಯಾಗಿ ಬಳಸಲು ಶಾಲಾ ನಾಯಕರಾಗಿ ನೀವು ಮುಖ್ಯಾಂಶಗಳ ಬಗ್ಗೆ ಚಿಂತನೆಯನ್ನು ಕೈಗೊಳ್ಳುವ ಅಗತ್ಯವಿದೆ, ಇತರರೊಂದಿಗೆ ಈ ವಿಚಾರವನ್ನು ಹಂಚಿಕೊಂಡು, ಚರ್ಚಿಸಬೇಕು, ಮತ್ತು ಕ್ರಿಯಾ ಯೋಜನೆಯನ್ನು ಒಪ್ಪಿಕೊಳ್ಳುವ ಅಗತ್ಯವಿದೆ. ಈ ಪ್ರಕ್ರಿಯೆಯನ್ನು ಪ್ರಾರಂಭಿಸಲು ಈ ಕೆಳಗೆ ನೀಡಿರುವ ಚಟುವಟಿಕೆಗಳು ಮತ್ತು ಚರ್ಚೆಗಳು ನಿಮಗೆ ಸಹಕಾರಿಯಾಗುವುದು.

## ಚಟುವಟಿಕೆ 7: ಸಾಧಿತ ಫಲಗಳನ್ನು ತಂಡದ ಮೂಲಕ ಪರಿಶೀಲಿಸುವುದು

ನಿಮ್ಮ ತಂಡದೊಂದಿಗೆ, ನೀವು ಕಲೆಹಾಕಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲು ಕೆಲವು ಸಮಯವನ್ನು ಮೀಸಲಿಡಿ. ಇದನ್ನು ಮಾಡುವ ಒಂದು ವಿಧಾನ, ಕಾರ್ಯಾಗಾರದ ಶಿಬಿರಾರ್ಥಿಗಳನ್ನು ಇಬ್ಬರ ಅಥವಾ ಮೂರು ಜನರ ತಂಡಗಳನ್ನಾಗಿ ವಿಭಾಗಿಸುವುದು ಮತ್ತು ಈ ಕೆಳಗೆ ನೀಡಿರುವ ಯಾವುದಾದರೂ ಒಂದು ಅಥವಾ ಎರಡು ಅಂಶಗಳನ್ನು ಆಳವಾಗಿ ಪರಿಗಣಿಸಬೇಕೆಂದು ಹೇಳುವುದನ್ನು ಒಳಗೊಂಡಿದೆ. (Character Education Partnership, 2010).

- ಸಾಮಾಜಿಕ ವಾತಾವರಣ
- ಬೌದ್ಧಿಕ ವಾತಾವರಣ

- ಕಾನೂನು ಮತ್ತು ತತ್ವಗಳು
- ಸಂಪ್ರದಾಯ ಮತ್ತು ರೂಢಿಗತ ಕ್ರಿಯೆಗಳು
- ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಯವರಿಗೆ ಮುಕ್ತ ಸ್ವಾತಂತ್ರ್ಯ ನೀಡುವುದು
- ಪಾಲಕರೊಂದಿಗೆ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವುದು
- ಸಂಬಂಧಗಳನ್ನು ಮತ್ತು ವರ್ತನೆಗಳನ್ನು ನಿರ್ವಹಿಸುವ ಸಲುವಾಗಿ ನಿಯಮಗಳು

ಆನಂತರ ಅವರು ಪರಿಗಣಿಸಿರುವ ನಿರ್ದಿಷ್ಟ ಅಂಶಕ್ಕೆ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ಈ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರವನ್ನು ನೀಡುವ ಮೂಲಕ ವರದಿಯನ್ನು ನೀಡಬಹುದು:

- ಧನಾತ್ಮಕ ಕಲಿಕಾ ಸಂಸ್ಕೃತಿಯನ್ನು ಸ್ಥಾಪಿಸಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಸ್ತುತ ಶಾಲಾ ಅಭ್ಯಾಸಗಳ ಗುಣಲಕ್ಷಣಗಳೇನು?
- ಪ್ರಸ್ತುತ ಯಾವ ಅಂಶ /ಲಕ್ಷಣಗಳು ಧನಾತ್ಮಕ ಕಲಿಕಾ ಸಂಸ್ಕೃತಿಯನ್ನು ಹುಟ್ಟುಹಾಕಲು ತಡೆಯುತ್ತಿರುವುದು?
- ಪ್ರಸ್ತುತ ಸ್ಥಿತಿಯನ್ನು ಸುಧಾರಿಸುವಲ್ಲಿನ ಸಂಭಾವ್ಯವಿರುವ ಕ್ರಿಯೆ ಅಥವಾ ಬದಲಾವಣೆ ಬಗ್ಗೆ ಚರ್ಚೆಯನ್ನು ಕೈಗೊಂಡಿದ್ದೀರಾ?

ಒಮ್ಮೆ ಬಾರಿಬಾರಿಯಾಗಿ ಎಲ್ಲಾ ಅಂಶಗಳಿಗೂ ಉತ್ತರಿಸಿದ ನಂತರ ಒಂದು ತಂಡವಾಗಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ:

1. ಯಾವ ಅಂಶವು ಶಾಲೆಗೆ ಬಲ ನೀಡುವ ಕ್ಷೇತ್ರ ವೆಂದು ನೀವು ಭಾವಿಸಿದ್ದೀರಿ?ಹಾಗೂ ಧನಾತ್ಮಕ ಕಲಿಕಾ ಸಂಸ್ಕೃತಿಯನ್ನು ಸ್ಥಾಪಿಸಲು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಅಂಶ ಯಾವುದು?
2. ಯಾವ ಅಂಶಗಳು ಅಭಿವೃದ್ಧಿ ಪಡಿಸಬೇಕಾದ ಕ್ಷೇತ್ರಗಳು ಎಂದು ನಿಮಗನಿಸುತ್ತದೆ? ಹಾಗೂ ಧನಾತ್ಮಕ ಕಲಿಕಾ ಸಂಸ್ಕೃತಿಯ ಸ್ಥಾಪನೆಗೆ ಅಡ್ಡಿಪಡಿಸುತ್ತಿರುವ ಶಾಲೆಯ ಅಂಶವನ್ನು ಪ್ರತಿನಿಧಿಸುತ್ತಿರುವ ಅಂಶಗಳು ಯಾವುವು?

ಸಿ,ಇ,ಪಿ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ನಿಮ್ಮ ತಂಡವು ಗುರುತಿಸಿರುವ ಅಂಶ/ಸಮಸ್ಯೆಗಳು ಮತ್ತು ಈ ಮೇಲಿನ ಎರಡು ಪ್ರಶ್ನೆಗಳಿಗೆ ನಿಮ್ಮ ಉತ್ತರ ಇವು ನಿಮ್ಮ ಶಾಲೆಯಲ್ಲಿ ಕಲಿಕಾ ಸಂಸ್ಕೃತಿಯನ್ನು ಉತ್ತಮಪಡಿಸಲು ಅಭಿವೃದ್ಧಿಪಡಿಸುವ ಕ್ರಿಯಾಯೋಜನೆಯ ಅಡಿಪಾಯವಾಗಿದೆ. ಚಟುವಟಿಕೆ 8 ಈ ಪ್ರಕ್ರಿಯೆಯನ್ನು ಪ್ರಾರಂಭಿಸಲು ನಿಮಗೆ ಸಹಾಯಕವಾಗುವುದು, ಆದರೆ ನಿಮ್ಮ ಸ್ಪಂದನೆಯನ್ನು /ಕ್ರಿಯೆಯನ್ನು ರಚಿಸುವ ಮೊದಲು ಆಧಾರಿತವಾಗಿರುವ ಮಾಹಿತಿಗಳನ್ನು ಮತ್ತೊಮ್ಮೆ ಪುನರಾವಲೋಕಿಸುವ ಕಾರ್ಯಮಾಡುವುದು ಒಳಿತು.

ಈ ಮೇಲೆ ಚರ್ಚಿಸಿರುವಂತೆ, ಶಾಲಾ ಸಂಸ್ಕೃತಿಯನ್ನು ಬದಲಾಯಿಸುವುದು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ:

- ಕ್ರಮಗಳನ್ನು ಹೇಗೆ ಕೈಗೊಳ್ಳಲಾಯಿತು ಹಾಗೂ ಏನಾಯಿತು ಎಂಬುದರ ಬಗ್ಗೆ ಅರಿವನ್ನು ಹೊಂದಿರುವುದು.
- ಶಾಲಾ ನಾಯಕರು ಮತ್ತು ಸಿಬ್ಬಂದಿಗಳು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು, ಅಥವಾ ಸಿಬ್ಬಂದಿಗಳು ಮತ್ತು ಪೋಷಕರ ನಡುವೆ ಹೇಗೆ ಸಾಂಸ್ಕೃತಿಕ ಮಾಹಿತಿಗಳು ರವಾನೆಯಾಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮಹತ್ವದ್ದಾಗಿದೆ.
- ಕಾಲಾನುಕ್ರಮದಲ್ಲಿ ಆದಂತಹ ನಿಧಾನ, ಏರಿಕೆಯ ಬದಲಾವಣೆಗಳು.
- ಶಾಲಾ ಸಮುದಾಯದ ಪ್ರತೀ ಸದಸ್ಯರು.
- ನಿಮ್ಮ ಕ್ರಿಯಾ ಯೋಜನೆಯನ್ನು ಎಸ್.ಎಂ.ಸಿ ಯೊಂದಿಗೆ ಹಂಚಿಕೊಳ್ಳುವುದು, ಇದನ್ನು ಶಾಲಾ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸುವುದು.

ಶಾಲಾ ಶಿಕ್ಷಕರಾಗಿ ನಿಮ್ಮ ವಿದ್ಯಾರ್ಥಿಗಳಿಗೆ ಧನಾತ್ಮಕ ಕಲಿಕಾ ಪರಿಸರವನ್ನು ಬೆಂಬಲಿಸುವ ವರ್ತನೆಗಳು, ಮನೋಭಾವಗಳು, ಅಪೇಕ್ಷೆಗಳು ಮತ್ತು ಸಂವಹನಗಳನ್ನು ಮಾದರೀಕರಿಸುವ ಮೂಲಕ ಶಾಲಾ ಸಂಸ್ಕೃತಿಯನ್ನು ಸ್ಥಾಪಿಸಲು ಸಹಕರಿಸಬೇಕು. ಹಾಗೂ ನೀವು ಶಾಲೆಯ ಧ್ಯೇಯ ಮತ್ತು ಗುರಿಗಳನ್ನು ಹಂಚಿಕೊಳ್ಳುವ ಮೂಲಕ ಸಂಸ್ಕೃತಿಯು ವ್ಯಕ್ತವಾಗುವಂತೆ ಸಹಕರಿಸಬೇಕು. ಪರಿಣಾಮಕಾರಿ ಕಲಿಕೆ ಕಾರ್ಯರೂಪಕ್ಕೆ ಬರುವುದಕ್ಕೆ ಅಡ್ಡಿಯಾದ ಅಂಶಗಳನ್ನು ಸಂಸ್ಕೃತಿಯನ್ನು ಮಾದರೀಕರಿಸುವ ಮತ್ತು ಶಾಲೆಯ ಧ್ಯೇಯವನ್ನು ಹಂಚಿಕೊಳ್ಳುವ ಎರಡು ಅಂಶಗಳ ಮೂಲಕ ಅಡ್ಡಗಟ್ಟಬಹುದು/ಪರಿಗಣಿಸಬಹುದು.

## ಚಟುವಟಿಕೆ 8: ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು

ನಿಮ್ಮ ಚಟುವಟಿಕೆ 7ಕ್ಕೆ ಸಂಬಂಧಿಸಿದ ಕಾಯಾಗಾರದಲ್ಲಿ , ನೀವು ಶಾಲಾ ಸಂಸ್ಕೃತಿಯಲ್ಲಿ ಪರಿಗಣಿಸಬೇಕಾದಲ್ಲಿ ಅಗತ್ಯವಿರುವ ಅಂಶಗಳನ್ನು ಗುರುತಿಸುವಿರಿ. ಇದು ನಿರ್ದಿಷ್ಟ, ಗುರುತಿಸಬಹುದಾದ ಕಾರ್ಯಗಳನ್ನು ನೀವು ಸಮಸ್ಯಾತ್ಮಕವಾದ ಅಂಶಗಳೆಂದು ಗುರುತಿಸುವಿರಿ. ಆದರೆ ಇದಕ್ಕೆ ಸರಳವಾದ ಪರಿಹಾರ ನಿಮ್ಮ ಬಳಿ ಇರುವುದಿಲ್ಲ (ಉದಾಹರಣೆಗೆ ಸಾಮಾಜಿಕ ಪರಿಸರ). ಕೆಲವು ಅತೀ ತುರ್ತು ಎಂದೆನಿಸಬಹುದು ಮತ್ತು ಇತರರು ವಿವಿಧ ಹಂತಗಳೊಂದಿಗೆ ಬದಲಾವಣೆಗೆ ಕೊಡುಗೆಯನ್ನು ನೀಡುವಂತಹ ಧೀರ್ಘಾವಧಿ ಯೋಜನೆಯನ್ನು ರಚಿಸಬಹುದು.

ಸಾಧ್ಯವಿದ್ದಲ್ಲಿ, ಈ ಸಮಸ್ಯೆಗಳ ತಂತ್ರ ನೋಟವನ್ನು strategic view ಅಭಿವೃದ್ಧಿಪಡಿಸಲು, ನಿಮ್ಮ ತಂಡದೊಂದಿಗೆ ಸೇರಿ ಒಂದು ಕ್ರಿಯಾ ಯೋಜನೆಯನ್ನು ಅಭಿವೃದ್ಧಿ ಪಡಿಸಿ. ಸಾಮಾಜಿಕ ಪರಿಸರವನ್ನು ಉತ್ತಮಪಡಿಸುವ ಸಂಬಂಧಿತ ಉದಾಹರಣೆಯನ್ನು ಕೋಷ್ಟಕ 3ರಲ್ಲಿ ಈ ಕೆಳಗೆ ನೀಡಲಾಗಿದ್ದು, ಭರ್ತಿ ಮಾಡದ ನಮೂನೆಯನ್ನು ಸಂಪನ್ಮೂಲ 1ರಲ್ಲಿ ನೀಡಲಾಗಿದೆ. ಮೊದಲಿಗೆ ಮೊದಲನೇ ಕಾಲಂನಲ್ಲಿರುವ ಶೀರ್ಷಿಕೆಗಳನ್ನು ಬಳಸಿ, ನಂತರ ಮೇಲಿನ ಪಟ್ಟಿಯಲ್ಲಿರುವ ಪ್ರತೀ ಸಿ.ಇ.ಪಿ ವ್ಯಾಖ್ಯಾನಗಳಿಗೆ ಸಮಸ್ಯೆ/ಸವಾಲನ್ನು ವ್ಯಾಖ್ಯಾನಿಸಿ, ಅದರ ತುರ್ತುಸ್ಥಿತಿಯನ್ನು ವರದಿ ಮಾಡಿ, ನೀವು ಏನು ಮಾಡಲು ಹೊರಟಿದ್ದೀರಿ ಹಾಗೂ ಇದನ್ನು ಹೇಗೆ ತಿಳಿಸುವಿರಿ ಎಂಬುದನ್ನು ವರ್ಣಿಸಿ/ವಿವರಿಸಿ, ಯಾರನ್ನು ಪಾಲ್ಗೊಳ್ಳುವಂತೆ ಮಾಡುವ ಅಗತ್ಯವಿದೆ ಎಂಬುದನ್ನು ತೋರಿಸಿ ಮತ್ತು ಪ್ರಗತಿಯನ್ನು ಹೇಗೆ ಪರಿಶೀಲಿಸಲಾಗುವುದು ಎಂಬುದರ ಬಗ್ಗೆ ವಿವರವನ್ನು ಒದಗಿಸಿ.

**ಕೋಷ್ಟಕ 3 ಕ್ರಿಯಾ ಯೋಜನೆಯ ಉದಾಹರಣೆ.**

| | |
|---|---|
| ಸಂಸ್ಕೃತಿಯ ಅಂಶಗಳು (ಸಿ.ಇ.ಪಿ ವ್ಯಾಖ್ಯಾನವನ್ನು ಬಳಸಿ) | ಸಾಮಾಜಿಕ ವಾತಾವರಣ, ಬೌದ್ಧಿಕ ವಾತಾವರಣ, ಕಾನೂನು ಮತ್ತು ತತ್ವಗಳು, ಸಂಪ್ರದಾಯ ಮತ್ತು ರೂಢಿಗತ ಕ್ರಿಯೆಗಳು, ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಯವರಿಗೆ ಮುಕ್ತ ಸ್ವಾತಂತ್ರ್ಯ ನೀಡುವುದು, ಪಾಲಕರೊಂದಿಗೆ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವುದು, ಸಂಬಂಧಗಳನ್ನು ಮತ್ತು ವರ್ತನೆಗಳನ್ನು ನಿರ್ವಹಿಸುವ ಸಲುವಾಗಿ ನಿಯಮಗಳು (ಈ ಸಮಸ್ಯೆಗೆ ಸಂಬಂಧಿಸಿದ ಅಂಶಗಳಿಗೆ ವೃತ್ತವನ್ನು ಹಾಕಿರಿ). |
| ಸಮಸ್ಯೆ ಅಥವಾ ಸಮಸ್ಯೆಗಳು | ಕಲಿಕೆಯನ್ನು ಸ್ವಾಗತಿಸುವ /ಕಲಿಕಾ ಪೂರಕ ವಾತಾವರಣವನ್ನು ಸೃಷ್ಟಿಸುವುದು. |
| ತುರ್ತು (ಉನ್ನತ /ಅಲ್ಪಕಾಲಿಕ, ಮಾಧ್ಯಮಿಕ ಅಥವಾ ಧೀರ್ಘಕಾಲಿಕ) | ಉನ್ನತ (ಅಲ್ಪಕಾಲಿಕ) |
| ಹೇಗೆ (ಕ್ರಮಗಳು ಅಥವಾ, ಸ್ಪಂದನೆಯ ವಿಧಗಳು) | ಪ್ರತಿಯೊಬ್ಬ ಶಿಕ್ಷಕರು ತರಗತಿಯ ಬಾಗಿಲಲ್ಲಿ ನಿಂತು ಮಕ್ಕಳಿಗೆ ನಗುತ್ತಾ ಸ್ವಾಗತಕೋರುವುದನ್ನು ಖಾತರಿಪಡಿಸಿಕೊಳ್ಳಬೇಕು. |
| ಪ್ರಸರಣ (ಈ ಕ್ರಮವನ್ನು /ಮಾತುಕತೆಯನ್ನು ಇತರರೊಂದಿಗೆ ಹೇಗೆ ಹಂಚಿಕೊಳ್ಳುವುದು) | ಸಿಬ್ಬಂದಿಗಳ ಸಭೆಯಲ್ಲಿ ಚರ್ಚಿಸುವುದು, ಮುಂದಿನ ಸಭೆಯಲ್ಲಿ ನೆನಪಿನೊಂದಿಗೆ ಚರ್ಚಿಸುವುದು. |
| ಸಹಯೋಗ (ಸಿಬ್ಬಂದಿಗಳು, ವಿದ್ಯಾರ್ಥಿಗಳು, ಪೋಷಕರು, ಇತರರು) | ತಂಡ ಮತ್ತು ಪ್ರಿನ್ಸಿಪಾಲರು ಮಾದರಿ ವರ್ತನೆಗಳನ್ನು ಶಾಲೆಯ ಸುತ್ತಾ ಪ್ರದರ್ಶಿಸುವರು, ಈ ಸಮಸ್ಯೆ/ಸವಾಲಿಗೆ ಕೊಡುಗೆ ನೀಡುವ ಇತರೆ ಕ್ರಮಗಳ ಬಗ್ಗೆ ವಿದ್ಯಾರ್ಥಿ ಮಂಡಳಿ ಹಾಗೂ ಪೋಷಕರ ಮಂಡಳಿ ಚರ್ಚಿಸುವರು. |
| ಪರಿಶೀಲನೆ (ಯಾರು, ಕಾಲಾವಧಿ, ಹೇಗೆ) | ಆರು ವಾರಗಳ ನಂತರ, ಪಾಠಗಳ ಬದಲಾವಣೆಯ ಸಮಯದಲ್ಲಿ ಶಾಲಾ ನಾಯಕರು ಶಾಲೆಯ ಸುತ್ತಾ ನಡಿಗೆಯನ್ನು ಕೈಗೊಳ್ಳುವರು ಮತ್ತು ಸಿಬ್ಬಂದಿಗಳ ಸಭೆಯಲ್ಲಿ ಈ ಬಗ್ಗೆ ಚರ್ಚಿಸುವರು. |

ಈ ನಮೂನೆಯನ್ನು ಪೂರ್ಣಗೊಳಿಸುವುದು ಒಂದು ಸವಾಲು ಎಂದು ನಿಮಗನಿಸಿರಬಹುದು. ವಾಸ್ತವವಾಗಿ ಯಾರು, ಹೇಗೆ ಮತ್ತು ಯಾವಾಗ ಎಂಬ ಅಂಶವನ್ನು ಗುರುತಿಸುವುದು ಕಷ್ಟಕರ, ಆದರೆ ಬದಲಾವಣೆಯನ್ನು ತರಲು ಇರುವುದು ಇದೊಂದೇ ದಾರಿ. ಈ ಕ್ರಿಯಾ ಯೋಜನೆಯು ಒಂದು ಕಾರ್ಯಕಾರಿ ದಾಖಲೆಯಾಗಬೇಕು, ಹೊಸ ಸಾಕ್ಷ್ಯಾಧಾರಗಳು ಬೆಳಕಿಗೆ ಬಂದಂತೆ ಸೇರಿಸುವ ಮತ್ತು ಮಾರ್ಪಾಡಿಸಬೇಕು ಎಂಬುದನ್ನು ನೀವು ಗಮನಿಸಬೇಕು; ಕ್ರಿಯೆಯ ಮಹತ್ವದ ಹಂತ/ಶ್ರೇಣಿಯನ್ನಾಗಲೀ ನೀವು ಬದಲಾಯಿಸಬಹುದು ಅಥವಾ ನಿಮಗೆ ಸಿಬ್ಬಂದಿಗಳು, ವಿದ್ಯಾರ್ಥಿಗಳು, ಹಾಗೂ ಪೋಷಕರು ವಿವಿಧ ಆದ್ಯತೆಗಳನ್ನು ನಿಮಗೆ ಹೇಳಬಹುದು. ಇಲ್ಲಿ ಮುಖ್ಯವಾದ ಅಂಶವೆಂದರೆ ಇದು ನಿಮ್ಮ ಯೋಜನೆಯಲ್ಲ ಬದಲಾಗಿ ಇದು ಶಾಲಾ ಸಮುದಾಯಕ್ಕೆ ಸೇರಿದ್ದು ಎಂದು ಹೇಳುವುದು. ನೆನಪಿಡಿ ನೀವು ಇದನ್ನು ನಿಮ್ಮ ಎಸ್.ಎಂ.ಸಿಯವರೊಂದಿಗೆ ಹಂಚಿಕೊಳ್ಳಬೇಕು ಮತ್ತು ಅವರ ಸಮ್ಮತಿಯನ್ನು ಪಡೆದುಕೊಳ್ಳಬೇಕು. ಕ್ರಮವನ್ನು ಕೈಗೊಳ್ಳುವಲ್ಲಿ ಸಮುದಾಯವನ್ನು ಭಾಗವಹಿಸುವಂತೆ ಮಾಡಲು ಇದನ್ನು ಸಿಬ್ಬಂದಿಗಳ ಕೊಠಡಿಯಲ್ಲಿ ಪ್ರದರ್ಶಿಸುವುದು ಅಥವಾ ಪೋಷಕರೊಂದಿಗೆ ಅಥವಾ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಲು ನಿರ್ಧಾರವನ್ನು ಕೈಗೊಳ್ಳಬಹುದು.

ಇಚ್ಛಾಸಕ್ತಿಯಿದ್ದಲ್ಲಿ ಹಾಗೂ ನಾವು ಮಾಡುವ ರೀತಿಯಲ್ಲಿಯೇ ಏಕೆ ನಾವು ಕೆಲಸ ಮಾಡುತ್ತೇವೆ ಎಂಬ ವಿವರಣೆಯನ್ನು ವ್ಯಕ್ತಪಡಿಸಿದಲ್ಲಿ ಬದಲಾವಣೆಯು ಬಹಳ ಸರಳ. ಶಾಲೆಯು ಜವಾಬ್ದಾರಿಯುತ ಮತ್ತು ಸಮರ್ಪಕವಾಗಿ ಉಳಿಯುವಂತೆ ಖಾತರಿಪಡಿಸಿಕೊಳ್ಳಲು, ಶಾಲಾ ನಾಯಕರು ಶಾಲೆಯ ಸಂಸ್ಕೃತಿಯು ಸಾರ್ವಕಾಲಿಕವಾಗಿ ವ್ಯಕ್ತವಾಗುವಂತೆ ಮತ್ತು ಶಾಲೆಯಲ್ಲಿ ಅನುಸರಿಸಲಾಗುವ ವಿಧಾನಗಳು ಮತ್ತು ರೂಢಿಗಳ ಕಾರಣಗಳ ಸತ್ಯಾಸತ್ಯತೆಯನ್ನು ಪುನರ್‌ಪರೀಕ್ಷಿಸಲು ನಿಯಮಿತವಾಗಿ ಪುನರಾವಲೋಕಿಸುವುದನ್ನು ಖಾತರಿಪಡಿಸಿಕೊಳ್ಳುವುದು ನಿರ್ಣಾಯಕವಾಗಿದೆ. ನೆನಪಿಡಿ, ಒಬ್ಬ ನಾಯಕರಾಗಿ ನೀವು ಮಾದರಿ ವ್ಯಕ್ತಿಯಾಗಬೇಕು.

# 5 ಸಾರಾಂಶ

ಪ್ರಸ್ತುತ ಈ ಘಟಕದಲ್ಲಿ ಧನಾತ್ಮಕ ಶಾಲಾ ಸಂಸ್ಕೃತಿಯನ್ನು ನಿರ್ಧರಿಸುವ ಅಂಶಗಳು ಯಾವುವು ಮತ್ತು ಹೇಗೆ ಎಂಬುದನ್ನು ಅನ್ವೇಷಿಸಲಾಗಿದೆ ಹಾಗೂ ಶಾಲಾ ನಾಯಕರಾಗಿ ನಿಮ್ಮ ಶಾಲೆಯಲ್ಲಿ ಕಲಿಕಾ ಸಂಸ್ಕೃತಿಯನ್ನು ಉನ್ನತೀಕರಿಸಲು ನೀವು ನಿಮ್ಮ ಶಿಕ್ಷಕರು ಮತ್ತು ಭಾಗೀದಾರರೊಂದಿಗೆ ಕಾರ್ಯನಿರ್ವಹಿಸಬಹುದು. ಇದು ಅವಲೋಕನ, ಮತ್ತು ಬದಲಾವಣೆಗಾಗಿ ಕ್ರಿಯಾಯೋಜನೆಯನ್ನು ತಯಾರಿಸುವುದನ್ನು ಒಳಗೊಂಡಂತೆ ಸಾಕ್ಷ್ಯಾಧಾರಗಳ ಮೇಲೆ ಕಾರ್ಯನಿರ್ವಹಿಸುವುದನ್ನು ಒಳಗೊಂಡಿದೆ. ನೀವು ನಿಮ್ಮ ಶಾಲೆಯು ಸುಧಾರಣೆಯತ್ತ ಹೋಗಬೇಕೆಂದು ಬಯಸಿದಲ್ಲಿ ಕಾಲಕಾಲಿಕ ಪರಿಶೀಲನೆಯನ್ನು ಕೈಗೊಳ್ಳಬೇಕಾದುದು ಬಹಳ ಮುಖ್ಯವಾದುದಾಗಿದೆ. ಸಮಸ್ಯೆಯನ್ನು ಬಗೆಹರಿಸುವಲ್ಲಿ, ಗುರಿಗಳನ್ನು ಒಪ್ಪಿಕೊಳ್ಳುವಲ್ಲಿ ಮತ್ತು ಪ್ರಗತಿಯ

ಮೇಲ್ವಿಚಾರಣೆ ಮಾಡುವಲ್ಲಿ ಇತರರನ್ನು ಪಾಲ್ಗೊಳ್ಳುವಂತೆ ಮಾಡಬೇಕು. ಪ್ರತಿಯೊಬ್ಬರೂ ಕಲಿಕೆಯನ್ನು ಉತ್ತೇಜಿಸುವಲ್ಲಿ ತಮ್ಮ ಪಾತ್ರದ ಬಗ್ಗೆ ಅರಿವನ್ನು ಹೊಂದಿದಲ್ಲಿ ನಿಮ್ಮ ಧನಾತ್ಮಕ ಶಾಲಾ ಸಂಸ್ಕೃತಿಯನ್ನು ಸಾಧಿಸುವ ಅಂಶ ಹಂಚಿತ ಉದ್ದೇಶವಾಗಿ ಮಾರ್ಪಡುವುದು

ಈ ಘಟಕವು ಬೋಧನಾ–ಕಲಿಕಾ ಪ್ರಕ್ರಿಯೆ ವರ್ಗಾವಣೆಯ ಮುಖ್ಯಾಂಶಗಳಿಗೆ ಸಂಬಂಧಿಸಿದ ಘಟಕಗಳ ಗುಚ್ಛದ ಒಂದು ಭಾಗವಾಗಿದೆ (ನ್ಯಾಷನಲ್ ಕಾಲೇಜ್ ಆಫ್ ಸ್ಕೂಲ್ ಲೀಡರ್‌ಶಿಪ್‌ನೊಂದಿಗೆ ಹೊಂದಿಕೆಯಾಗಿದೆ.). ನಿಮ್ಮ ಜ್ಞಾನ ಮತ್ತು ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು ಈ ಗುಚ್ಛದ ಇತರ ಘಟಕಗಳನ್ನು ಪರಾಮರ್ಶಿಸಬಹುದು.

- ಪ್ರಾಥಮಿಕ ಶಾಲಾ ಹಂತದಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆಯನ್ನು ಮುನ್ನಡೆಸುವುದು/ಹೆಚ್ಚಿಸುವುದು.
- ಪ್ರೌಢಶಾಲಾ ಹಂತದಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆಯನ್ನು ಮುನ್ನಡೆಸುವುದು/ಹೆಚ್ಚಿಸುವುದು.
- ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಶಿಕ್ಷಕರಿಗೆ ಬೆಂಬಲಿಸುವುದು.
- ಶಿಕ್ಷಕರ ವೃತ್ತಿ ಬೆಳವಣಿಗೆಯನ್ನು ಮುನ್ನಡೆಸುವುದು.
- ಮೆಂಟರಿಂಗ್ ಮತ್ತು ಕೋಚಿಂಗ್
- ನಿಮ್ಮ ಶಾಲೆಯಲ್ಲಿ ಪರಿಣಾಮಕಾರಿ ಕಲಿಕಾ ಸಂಸ್ಕೃತಿಯನ್ನು ಬೆಳೆಸುವುದು. .
- ನಿಮ್ಮ ಶಾಲೆಯಲ್ಲಿ ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು.
- ವಿದ್ಯಾರ್ಥಿಯ ಪರಿಣಾಮಕಾರಿ ಕಲಿಕೆಗೆ ಸಂಪನ್ಮೂಲಗಳನ್ನು ನಿಭಾಯಿಸುವುದು.
- ನಿಮ್ಮ ಶಾಲೆಯಲ್ಲಿ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸುವುದು.

# ಸಂಪನ್ಮೂಲಗಳು

## ಸಂಪನ್ಮೂಲ 1: ಕ್ರಿಯಾ ಯೋಜನೆ (Plan of action)

- ***ಕೋಷ್ಟಕ ಆರ್ 1.1 ಕ್ರಿಯಾ ಯೋಜನೆ –ಭರ್ತಿ ಮಾಡಿಲ್ಲದ ನಮೂನೆ (ಚಟುವಟಿಕೆ 8 ನ್ನು ನೋಡಿ)***

| | |
|---|---|
| **ಸಂಸ್ಕೃತಿಯ ಅಂಶಗಳು (ಸಿ.ಇ.ಪಿ ವ್ಯಾಖ್ಯಾನವನ್ನು ಬಳಸಿ)** | ಸಾಮಾಜಿಕ ವಾತಾವರಣ, ಬೌದ್ಧಿಕ ವಾತಾವರಣ, ಕಾನೂನು ಮತ್ತು ತತ್ವಗಳು, ಸಂಪ್ರದಾಯ ಮತ್ತು ರೂಢಿಗತ ಕ್ರಿಯೆಗಳು, ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಯವರಿಗೆ ಮುಕ್ತ ಸ್ವಾತಂತ್ರ್ಯ ನೀಡುವುದು, ಪಾಲಕರೊಂದಿಗೆ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವುದು, ಸಂಬಂಧಗಳನ್ನು ಮತ್ತು ವರ್ತನೆಗಳನ್ನು ನಿರ್ವಹಿಸುವ ಸಲುವಾಗಿ ನಿಯಮಗಳು (ಈ ಸಮಸ್ಯೆಗೆ ಸಂಬಂಧಿಸಿದ ಅಂಶಗಳಿಗೆ ವೃತ್ತವನ್ನು ಹಾಕಿರಿ). |
| **ಸಮಸ್ಯೆ ಅಥವಾ ಸಮಸ್ಯೆಗಳು** | |
| **ತುರ್ತು (ಉನ್ನತ /ಅಲ್ಪಕಾಲಿಕ, ಮಾಧ್ಯಮಿಕ ಅಥವಾ ಧೀರ್ಘಕಾಲಿಕ)** | |
| **ಹೇಗೆ (ಕ್ರಮಗಳು ಅಥವಾ , ಸ್ಪಂದನೆಯ ವಿಧಗಳು)** | |
| **ಪ್ರಸರಣ (ಈ ಕ್ರಮವನ್ನು /ಮಾತುಕತೆಯನ್ನು ಇತರರೊಂದಿಗೆ ಹೇಗೆ ಹಂಚಿಕೊಳ್ಳುವುದು)** | |
| **ಸಹಯೋಗ (ಸಿಬ್ಬಂದಿಗಳು, ವಿದ್ಯಾರ್ಥಿಗಳು, ಪೋಷಕರು, ಇತರರು)** | |
| **ಪರಿಶೀಲನೆ (ಯಾರು, ಕಾಲಾವಧಿ, ಹೇಗೆ)** | |

# ಪರಾಮರ್ಶನಾ ಗ್ರಂಥಗಳು /ಗ್ರಂಥಸೂಚಿ

Bulach, C.R. (2001) ‘A 4-step process for identifying and reshaping school culture’, *Principal Leadership*, vol. 1, no. 8, pp. 48–51.

Character Education Partnership (2010) ‘Developing and assessing school culture: a new level of accountability for schools’ (online), position paper, May. Washington, DC: Character Education Partnership. Available from: http://www.character.org/uploads/PDFs/White_Papers/DevelopingandAssessingSchoolCulture.pdf (accessed 21 November 2014).

MacNeil, A.J., Prater, D.L. and Busc, S. (2009) 'The effects of school culture and climate on student achievement', *International Journal of Leadership in Education*, vol. 12, no. 1, pp. 73–84.

National Council of Educational Research and Training (2005) *National Curriculum Framework*, National Council of Educational Research and Training. Available from: http://www.ncert.nic.in/rightside/links/pdf/framework/english/nf2005.pdf (accessed 25 September 2014).

National University of Educational Planning and Administration (2014) *National Programme Design and Curriculum Framework*. Delhi: NUEPA. Available from: https://xa.yimg.com/kq/groups/15368656/276075002/name/SLDP_Framework_Text_NCSL_NUEPA.pdf (accessed 14 October 2014).

Pollard, A. and Triggs, P. (1997) *Reflective Teaching in Secondary Education*. London: Continuum.

Stoll, L. and Fink, D. (1996) *Changing Our Schools: Linking School Effectiveness and School Improvement*. Buckingham: Open University Press.

# ಕೃತಜ್ಞತೆಗಳು

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.